# ಐಕ್ಯರಂಗ

ಪಾಕ್ಷಿಕ ಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 31 ಜುಲೈ 29, 1984 ಬೆಲೆ 60 ಪೈಸೆ.

## ಮಹಿಮಾನ್ ದೇಸಾಯಿ ಅವರಿಗೆ ಶ್ರದ್ಧಾಂಜಲಿ

ಸಿ. ಪಿ. ಐ. (ಎಂ)ನ ಗುಜರಾತ್ ರಾಜ್ಯ ಸಮಿತಿ ಸದಸ್ಯರೂ, ಬರೋಚ್ ಜಿಲ್ಲಾ ಸಮಿತಿಯ ಕಾರ್ಯದರ್ಶಿಯೂ ಆಗಿದ್ದ ಕಾಮ್ರೇಡ್ ಮಹಿಮಾನ್ ದೇಸಾಯಿ ಅವರು ಜೂನ್ 19 ರಂದು ತೀರಿಕೊಂಡರು ಕಳೆದ ಒಂದು ವರ್ಷದಿಂದ ಇವರು ಅರೆ ಪ್ರಜ್ಞಾವಸ್ಥೆಯಲ್ಲೇ ಇದ್ದರು.

ಸಮಾಜವಾದೀ ವರ್ತುಲದಿಂದ ಪ್ರಭಾವಿತರಾಗಿ 1949—50 ರಲ್ಲಿ ಮುಂಬೈಯನ್ನು ತೊರೆದು ಗುಜರಾತಿಗೆ ಬಂದ ಇವರು ಆದಿವಾಸಿ ರೈತರ ನಡುವೆ ತಮ್ಮ ದುಡಿಮೆಯನ್ನು ಪ್ರಾರಂಭಿಸಿದರು. ಅಂಕ್ಲೇಶ್ವರ ಅನ್ನು ಕಾರ್ಯ ಕ್ಷೇತ್ರದ ಕೇಂದ್ರವನ್ನಾಗಿ ಮಾಡಿಕೊಂಡು ಬರೋಚ್ ಮತ್ತು ಸೂರತ್ ಜಿಲ್ಲೆಗಳಲ್ಲಿನ ಕಿಸಾನ್ ಸಭಾದ ಜೀವನಾಡಿಯಾಗಿದ್ದರು. ಅವರು ತಮ್ಮ ಜೀವಿತವನ್ನು ಕಮ್ಯುನಿಸಂಗೆ, ಪಾರ್ಟಿಗೆ ಮತ್ತು ದುಡಿಯುವ ಜನರಿಗೆ ಸಮರ್ಪಿಸಿಕೊಂಡಿದ್ದರು. ಮೂರುವರೆ ದಶಕಗಳ ಕಾಲ, ಒಂದು ವರ್ಷದ ಹಿಂದೆ ರಾಜ್ ಪಿಪ್ಲಾ ಎಂಬಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡುವಾಗ ಶಾರೀರಿಕವಾಗಿ ತೊಂದರೆಗೊಳಗಾಗುವವರೆಗೂ ಅವರು ವಿಶ್ರಾಂತಿಯಿಲ್ಲದೆ ದುಡಿದರು.

ಗುಜರಾತಿನಲ್ಲಿ ನಡೆಯುವ ಎಲ್ಲಾ ಪ್ರಜಾಪ್ರಭುತ್ವ ಚಳವಳಿಗಳಲ್ಲೂ, ಐಕ್ಯ ಹೋರಾಟಗಳಲ್ಲೂ, ರೈತ ಆಂದೋಲನಗಳಲ್ಲೂ ಅವರು ಮುಂಚೂಣಿಯಲ್ಲಿ ನಿಲ್ಲುತ್ತಿದ್ದರು. ಭೂ ಹೀನರಿಗಾಗಿ ಅವರು ನಡೆಸಿದ ಧೀರ ಹೋರಾಟಗಳಿಗಾಗಿ ಅನೇಕ ಬಾರಿ ಜೈಲುವಾಸ ಅನುಭವಿಸಿದ್ದರು ಮತ್ತು ಗಡೀಪಾರಿಗೆ ಒಳಗಾಗಿದ್ದರು. 1964 ರಲ್ಲಿ ದೇಶಾದ್ಯಂತ ನಡೆದ ಸಿ. ಪಿ. ಐ. (ಎಂ) ಮುಖಂಡರ ಬಂಧನದ ಸಂದರ್ಭದಲ್ಲಿ ಅವರೂ ಕೂಡಾ ಮೀಸಾದಡಿ ಬಂಧಿತರಾಗಿ ಎರಡೂವರೆ ಕಾಲ ವರ್ಷ ಸೆರೆಮನೆಯಲ್ಲಿದ್ದರು.

ಕಾ. ಮಹಿಮಾನ್ ದೇಸಾಯಿ ಅವರ ನಿಧನ ಪಾರ್ಟಿಗೂ, ಗುಜರಾತಿನ ಪ್ರಜಾಪ್ರಭುತ್ವ ಚಳುವಳಿಗೂ ಮತ್ತು ರೈತ ಪಿ ವರ್ಗಕ್ಕೂ ಅಪಾರ ನಷ್ಟವನ್ನುಂಟು ಮಾಡಿದೆ.

# ಶಾಲೆಗಾಗಿ ಮಕ್ಕಳ ಕೂಗು....

# ಕುರ್ಚಿಗಾಗಿ ಶಾಸಕರ ಪರದಾಟ

ಎಲ್ಲ ಪ್ರದೇಶ, ಎಲ್ಲ ಜಾತಿ, ಎಲ್ಲ ಗುಂಪುಗಳಿಗೆ ಪ್ರಾತಿನಿಧ್ಯ ಒದಗಿಸುವ ಸಲುವಾಗಿ ಎಲ್ಲ ಮಂತ್ರಿಗಳೂ ರಾಜೀನಾಮೆ ಕೊಡಬೇಕೆಂದು ಮೂವತ್ತೆಂಟು ಜನತಾ ಶಾಸಕರ ಸಭೆ ನಿರ್ಣಯ ಕೈಗೊಂಡಿತ್ತು. ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಕೈ ಬಲಪಡಿಸಲು ಎಲ್ಲ ಮಂತ್ರಿಗಳೂ ತಮ್ಮ ರಾಜೀನಾಮೆ ಪತ್ರಗಳನ್ನು ಮುಖ್ಯಮಂತ್ರಿಯವರಿಗೆ ಸಲ್ಲಿಸಿದ್ದಾರೆ.

ಕಾಂಗ್ರೆಸ್ಸಿನವರಂತೆಯೇ ಜನತಾ ಶಾಸಕರೂ ಕೂಡ, ಜಾತಿ, ಉಪ-ಜಾತಿ, ಪ್ರದೇಶ ಗುಂಪುಗಳ ಆಧಾರದಲ್ಲಿ ಮಂತ್ರಿಮಂಡಲದಲ್ಲಿ ಮಂತ್ರಿಸ್ಥಾನ ಸಿಗಬೇಕೆಂದು ಪರದಾಡುತ್ತಿರುವಾಗ ಬಿಜಾಪುರದಲ್ಲಿ ಪ್ರಾಥಮಿಕ ಶಾಲೆಯ ಮಕ್ಕಳು ತಮಗೆ ಅಭ್ಯಾಸ ಮಾಡಲು ಶಾಲೆಕಟ್ಟಡ ಬೇಕೆಂದು ಬೀದಿಯಲ್ಲಿ ಕೂಗುತ್ತ ಶಿಕ್ಷಣಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಿ, ಆಕ್ರಮಣ ಮಾಡಿದರು. ಅದೇ ಸಮಯದಲ್ಲಿ ಬಿಜಾಪುರದ, ರೈತರೂ, ನಾಗರೀಕರೆಲ್ಲ ಅಲಮಟ್ಟಿ ಯೋಜನೆ ಆಗಲೇ ಬೇಕು ಮುಳವಾಡ ಯಾತನೀರಾವರಿಯನ್ನು ಕೂಡಲೇ ಕೈಗೊಂಡು ರೈತರಿಗೆ ನೀರಾವರಿ ಸೌಲಭ್ಯ ಒದಗಿಸಬೇಕೆಂದು ಘೋಷಣೆ ಕೂಗುತ್ತ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಮತ ಪ್ರದರ್ಶನ ಮಾಡಿದರು.

ಈ ರೀತಿ ಶಾಸಕರು ಅಧಿಕಾರಕ್ಕಾಗಿಯೂ, ಪ್ರಾಥಮಿಕ ಶಾಲೆ ಮಕ್ಕಳು ಅಭ್ಯಾಸಕ್ಕಾಗಿ ಆಶ್ರಯ ಒದಗಿಸಬೇಕೆಂದೂ, ರೈತರು ಭೂಮಿಗೆ ನೀರು, ಸಾರ್ವಜನಿಕರು ಕುಡಿಯಲು ನೀರು ಒದಗಿಸಬೇಕೆಂದೂ ಚಳವಳಿ ಹೂಡುತ್ತಿರುವಾಗ ರಾಜ್ಯದಲ್ಲಿಯ 58 ತಾಲೂಕುಗಳಲ್ಲಿ ಮಳೆಯಾಗದೆ ಗಂಭೀರ ಪರಿಸ್ಥಿತಿ ಉಂಟಾಗಿದೆಂಬ ರಾಜ್ಯ ಸರಕಾರದ ಪ್ರಕಟಣೆ ನಮ್ಮ ರಾಜ್ಯದ ಹಾಗೆಯೇ ಆಳುವ ಜನತಾ ಪಕ್ಷದೊಳಗಿನ ತುಮುಲ ಯುದ್ಧದ ಪರಿಸ್ಥಿತಿಯನ್ನು ಪ್ರದರ್ಶಿಸುತ್ತದೆ.

35 ವರ್ಷಗಳ ಕಾಂಗ್ರೆಸ್ ಆಡಳಿತೆಯನ್ನು ಸೋಲಿಸಿ ಕರ್ನಾಟಕದ ಜನತೆ ಜನತಾ, ಎರಡೂ ಕಮ್ಯೂನಿಸ್ಟ್ ಪಕ್ಷ ಮತ್ತು ಕ್ರಾಂತಿ ರಂಗದ ಒಕ್ಕೂಟದ ಮೇಲೆ ವಿಶ್ವಾಸವಿಟ್ಟು ಅಧಿಕಾರದಲ್ಲಿ ಬದಲಾವಣೆಯಾಗಬೇಕೆಂಬ ಅಪೇಕ್ಷೆ ವ್ಯಕ್ತ ಮಾಡಿದೆ. ಕ್ರಾಂತಿರಂಗದ ಬಂಗಾರಪ್ಪನವರು ಮೋಸ ಮಾಡಿದರೂ ಕೂಡ ಎರಡೂ ಕಮ್ಯೂನಿಸ್ಟ್ ಪಕ್ಷಗಳ, ಬಿ.ಜೆ.ಪಿ., ಮಹಾರಾಷ್ಟ್ರ ಏಕೀಕರಣ ಸಮಿತಿ, ಡಿ. ಎಂ. ಕೆ. ಹಾಗೂ ಕೆಲವು ಸ್ವತಂತ್ರ ಶಾಸಕರ ಬೆಂಬಲದಿಂದ ಜನತಾ ಪಕ್ಷ ಮಂತ್ರಿಮಂಡಲ ರಚಿಸಿತು. ಜನತಾ ಪಕ್ಷದಿಂದ ಕ್ರಾಂತಿಕಾರಿ ಬದಲಾವಣೆಯಾಗ ಬಹುದೆಂಬ ಅಪೇಕ್ಷೆಯನ್ನು ನಿರೀಕ್ಷಿಸದಿದ್ದರೂ ಕೂಡ, ಕಾಂಗ್ರೆಸ್ ಆಡಳಿತೆಗಿಂತ ಚುರುಕಾದ, ಕೆಲವು ಅತ್ಯಾವಶ್ಯಕ ಸಮಸ್ಯೆಗಳಿಗೆ ಪರಿಹಾರ ಸಿಗಬಹುದೆಂಬ ನಿರೀಕ್ಷೆ ಎಲ್ಲರಲ್ಲಿತ್ತು.

ಮೂವತ್ತೈದು ವರ್ಷಗಳಿಂದ ಕಾಂಗ್ರೆಸ್ ನಡೆಸಿಕೊಂಡು ಬಂದಂಥ ಆಡಳಿತೆಯಲ್ಲಿ, ರಾಜಕೀಯ, ಸಾಮಾಜಿಕ, ಆರ್ಥಿಕ ಕ್ಷೇತ್ರದಲ್ಲಿ ಎದ್ದು ಕಾಣುವಂಥ ಬದಲಾವಣೆ ತರುವುದು ಸುಲಭ ಸಾಧ್ಯವೇನಲ್ಲ. ಕೇರಳ, ಪ. ಬಂಗಾಲ, ತ್ರಿಪುರಾ ಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮುಖಂಡತ್ವದಲ್ಲಿ ಎಡರಂಗ ಸರಕಾರವೂ ಹಿಂದಿನ ಕಾಂಗ್ರೆಸ್ ಆಡಳಿತೆಯಿಂದಾಗಿ ಹುಟ್ಟಿ ಬೆಳೆದು ಬಂದಂಥ ಲಕ್ಷಣಗಳನ್ನು, ನಡೆಗಳನ್ನು, ಧೋರಣೆಗಳನ್ನು ಬದಲಾವಣೆ ಮಾಡಲು ಎಷ್ಟು ಶ್ರಮಪಡಬೇಕಾಗಿದೆಂಬ ಅನುಭವ ನಮಗಿದೆ. ಆದರೆ ಅಸ್ತಿತ್ವದಲ್ಲಿರುವ ಆಯ ಕಟ್ಟಿನೊಳಗೇ ಜನರ ಆವಶ್ಯಕ ಬೇಡಿಕೆಗಳಲ್ಲಿ ಕೆಲವನ್ನಾದರೂ ಪೂರೈಸಲು ಸಾಧ್ಯವಿದೆಂಬುದನ್ನು ಆ ಮೂರು ರಾಜ್ಯಗಳ ಎಡರಂಗ ಸರಕಾರಗಳು ತೋರಿಸಿಕೊಟ್ಟಿವೆ. ನಮ್ಮ ರಾಜ್ಯದಲ್ಲಿ ಜನತಾ ಸರಕಾರ ಅಧಿಕಾರದಲ್ಲಿ ಬಂದನಂತರ ಆ ರಾಜ್ಯಗಳ ಎಡರಂಗ ಸರಕಾರಗಳೊಡನೆ ಸಂಪರ್ಕ ಬೆಳೆಸಿ, ಅವರಿಂದ ಅನುಭವ ಪಡೆದು ಅದರ ಲಾಭ ಕರ್ನಾಟಕ ಜನತೆಗೂ ದೊರೆಯುವಂತೆ ಮಾಡುತ್ತಾರೆಂಬ ಆಸೆ ಇಟ್ಟುಕೊಂಡಿದ್ದರೆ ತಪ್ಪೇನಲ್ಲ. ಆದರೆ ಬಂಡವಾಳಶಾಹಿ ಮೂಲದ ಜನತಾ ಸರಕಾರದ ಹೆಚ್ಚಿನ ಮಂತ್ರಿಗಳು ಆ ರೀತಿಯ ಅನುಭವ ಪಡೆಯಲೂ ಹಿಂಜರಿಯುತ್ತಾರೆ. ಆದ್ದರಿಂದ ಕಾಂಗ್ರೆಸ್ ಆಡಳಿತೆಯ ಲೋಪ ದೋಷಗಳನ್ನೇ ನಾವು ಮುಂದುವರಿಸುತ್ತಿದ್ದೇವೆ.

ಬಿಜಾಪುರ ನಗರ, ಹಾಗೆಯೇ ಕರ್ನಾಟಕ ರಾಜ್ಯದ ಇತರೆಡೆಗಳಲ್ಲಿ ಬೆರಳಿನಲ್ಲೆಣಿಸುವಷ್ಟೇ ಪ್ರಾಥಮಿಕ ಶಾಲೆಗಳು ಮಕ್ಕಳ ವಿದ್ಯಾಭ್ಯಾಸಕ್ಕೆ ಯೋಗ್ಯವಾಗಿವೆ. ಬಿಜಾಪುರ ನಗರದ ಪ್ರಾಥಮಿಕ ಶಾಲೆಗಳನ್ನು ನೋಡಿದರೆ, ಬ್ರಿಟಿಷ್ ಕಾಲದ ಜೈಲು ಖಾನೆಗಳಿಗಿಂತಲೂ ಹೆಚ್ಚಿನ ಕತ್ತಲೆ ಕೋಣೆಗಳಾಗಿವೆ. ಮಳೆಗಾಲದಲ್ಲಿ ಮುದ್ದು ಮಕ್ಕಳೂ-ಗುರುಗಳೂ ದೃಷ್ಟಿ ಮೇಲೆ ಮಾಡಿ ತೊಲೆಗಳು ತಲೆಯ ಮೇಲೆ ಯಾವಾಗ ಬೀಳುತ್ತವೆಂಬುದನ್ನು ನೋಡುತ್ತ ಕೂತಂತೆಯೇ ಮಳೆರಾಯ ಸುರಿಸುವ ನಿರ್ಮಲ ನೀರಿನ ಅಭಿಷೇಕ ಮಾಡಿಕೊಳ್ಳುತ್ತಾ ಪುಸ್ತಕಗಳನ್ನು ಎದೆಗೆ ಅದುಮಿ ಹಿಡಿದು ಚಳಿಯಿಂದ ನಡುಗುತ್ತ ಕೂತಿರುವ ದೃಶ್ಯ ಯಾವ ಆಳುವವರ ಹೃದಯವನ್ನಾಗಲೀ ಕರಗಿಸಲೇ ಬೇಕು ಆದರೆ ಹೃದಯವೇ ಇಲ್ಲದ ಕಾಂಗ್ರೆಸ್ 35 ವರ್ಷ ಆಡಳಿತೆ ನಡೆಸಿತು. ಈಗ ಒಂದೂವರೆ ವರ್ಷದಿಂದ ಜನತಾ ಪಕ್ಷವೂ ಅಧಿಕಾರ ಚಲಾಯಿಸುತ್ತಿದೆ. ಆದರೆ ಶಾಲೆ ಬೀಳಬಹುದೆಂಬ ಅಂಜಿಕೆಯಿಂದ ಮಳೆಯಿಂದ ತೊಯಿಸಿಕೊಂಡು ಶಾಲೆಯನ್ನು ಮರಣ ಶಯ್ಯೆಯನ್ನಾಗಿ ಕಾತುರದಿಂದಲೇ ನೋಡುತ್ತಲೇ ಇರಬೇಕಾಗಿ ಬಂದಿರುವ ಎಳೆ ಕೂಸುಗಳ ದಾರುಣ ದೃಶ್ಯವನ್ನು ಜನತಾ ಸರಕಾರವೂ ಇನ್ನೂ ಅರಿತುಕೊಳ್ಳಲು ಪ್ರಯತ್ನ ಮಾಡದಿರುವುದು ಮಾತ್ರ ಅಕ್ಷಮ್ಯವೇ ಸರಿ.

ಮಂತ್ರಿಗಳ ವಾಸಕ್ಕೋ ಸರಕಾರಿ ಕಛೇರಿಗಳಿಗೋ ವಿಶ್ವಕನ್ನಡ ಮೇಳಕ್ಕೋ ಕೋಟ್ಯಾವಧಿ ರೂಪಾಯಿ ಖರ್ಚುಮಾಡುವ ಬದಲು ಪ್ರತಿವರ್ಷ ಪ್ರತಿಯೊಂದು ನಗರದಲ್ಲಿ ಎರಡೋ—ನಾಲ್ಕೋ ಪ್ರಾಥಮಿಕ ಶಾಲೆಗಳನ್ನು ಕಟ್ಟಿದ್ದರೆ. ಆದರೆ ಬೆಳೆದು ಬರುತ್ತಿರುವ ಪೀಳಿಗೆಗೆ ಮಹದುಪಕಾರ ಮಾಡಿದಂತಾಗುತ್ತದೆ.

ಆರಿಸಿ ಬಂದ ಶಾಸಕ, ಪ್ರತಿಜ್ಞಾವಿಧಿ ಸ್ವೀಕರಿಸಿದ ಕೂಡಲೇ ಬೆಂಗಳೂರಿನಲ್ಲಿ ಬಂಗ್ಲೆ ಕಟ್ಟಿಸುವ, ತಮ್ಮ ಮಕ್ಕಳನ್ನು ಇಂಗ್ಲಿಷ್ ಶಾಲೆಗಳಲ್ಲಿ ಸೇರಿಸುವ, ಆದಷ್ಟು ಕಮಿಟಿಗಳಲ್ಲಿ ಸದಸ್ಯತ್ವ ಗಿಟ್ಟಿಸುವ, ಅಧಿಕಾರಿಗಳನ್ನೂ, ನೌಕರದಾರರನ್ನೂ ಬದ್ಲಿಮಾಡಿಸುವ ಬದ್ಲಿಗಳನ್ನು ರದ್ದು ಪಡಿಸುವ ಮಹಾ ಮಹಾ ಕಾರ್ಯಗಳಲ್ಲೇ ಮಗ್ನರಾಗಿರುತ್ತಾರಲ್ಲದೆ, ಪ್ರಾಥಮಿಕ ಶಾಲೆಗಳ ದುಸ್ಥಿತಿ, ನೀರು, ನಿವೇಶನಗಳ ಸಮಸ್ಯೆಗಳ ಕುರಿತು ವಿಚಾರ ಮಾಡಲು ಕೂಡ ಪುರುಸೊತ್ತಿಲ್ಲದವರಾಗುತ್ತಿರುವುದು ಭಾರತ ದೇಶದ ಮಣ್ಣಿನ ವೈಶಿಷ್ಟತೆಯೋ ಜನಜಾಗೃತಿಯ ಅಭಾವವೋ ಜನಜಾಗೃತಿಯ ಜೊತೆಯಲ್ಲಿ ಎಡ ಮತ್ತು ಪ್ರಜಾ ಪ್ರಭುತ್ವ ಶಕ್ತಿಗಳು ಬೆಳೆದು ಬರಬೇಕು. ಸಮಾಜವನ್ನೇ ಬದಲಾವಣೆ ಮಾಡುವಂತೆ ಜನರನ್ನು ರಾಜಕೀಯವಾಗಿ, ಬದಲಾವಣೆ ಮಾಡಿ ಅವರಲ್ಲಿ ವರ್ಗ ಜಾಗೃತಿಯನ್ನುಂಟು ಮಾಡಬೇಕು. ಅಂಥ ಜಾಗೃತಿಯಿಂದ ವರ್ಗ ಸಂಘಟನೆ ಕಟ್ಟಿ ಹೋರಾಡಬೇಕು. ಅಂಥ ಶಕ್ತಿಯಿಂದ ಸಮಾಜದಲ್ಲಿ ಬದಲಾವಣೆಯನ್ನುಂಟು ಮಾಡಬಹುದು.

ಈ ಹಿಂದೆ ಪ್ರಾಥಮಿಕ ಶಾಲೆಗಳ ಜವಾಬ್ದಾರಿಯನ್ನು ಶಾಲಾ ಬೋರ್ಡುಗಳು ನಗರಸಭೆಗಳು ವಹಿಸಿಕೊಂಡಿದ್ದವು. ಅಂಥ ಸ್ಥಳೀಯ ಸಂಸ್ಥೆಗಳ ಮೇಲೆ ಒತ್ತಾಯ ತಂದು ಶಾಲೆಗಳನ್ನು ಕಟ್ಟಿಕೊಳ್ಳುವುದು ಸುಲಭವಿತ್ತು. ಶಾಲೆಗಳನ್ನು ಸರಕಾರ ವಹಿಸಿಕೊಟ್ಟದಿನಿಂದ ಪ್ರಾಥಮಿಕ ಶಿಕ್ಷಣ ಬಿಡಿ, ಪ್ರಾಥಮಿಕ ಶಾಲೆಗಳ ಸ್ಥಿತಿಗತಿ ತಿಳಿದುಕೊಳ್ಳಲು ಯಾರೂ ಬಯಸಿಲ್ಲ ಯಾಕೆಂದರೆ ಪ್ರಾಥಮಿಕ ಶಾಲೆಗಳ ಮಕ್ಕಳ ಮತದಿಂದ ಯಾರೂ ಶಾಸಕರಾಗುತ್ತಿಲ್ಲ, ಅಂಥ ಮಕ್ಕಳ ಪಾಲಕರಿಂದ ಎಂದು ಶಾಸಕರಿಗೆಲ್ಲಾ ತಿಳಿದುಬಂದಿರುವುದರಿಂದ, ಶಾಲಾ ಮಕ್ಕಳ ಸ್ಥಿತಿಗತಿಗಳನ್ನೆಲ್ಲಾ ಸಂಪೂರ್ಣ ಕಡೆಗಣಿಸಲಾಯಿತು. ಆದರೆ ಮತಗಳಿಕೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಕ್ಕಳ ಪಾಲಕರಿಗೆ ಸರ್ವವಿಧದ ಸೌಲಭ್ಯ ಒದಗಿಸಲಿಕ್ಕೆ ಮಾತ್ರ ಶಾಸಕರು ತಯಾರಿರುತ್ತಾರೆ.

(8ನೇ ಪುಟ ನೋಡಿ)

# ದುಡಿಯುವ ಮಹಿಳಾ ಚಳವಳಿ : ಸಮಸ್ಯೆಗಳು ಮತ್ತು ಕರ್ತವ್ಯಗಳು

ಕಾ|| ಬಿ. ಟಿ. ರಣದಿವೆ ಸಂಗ್ರಹ : ಗುರುಶಾಂತ್

ಕರ್ನಾಟಕ ರಾಜ್ಯ ಸಿ.ಐ.ಟಿ.ಯು. ವಿನ ನಾಲ್ಕನೆಯ ಸಮ್ಮೇಳನದಲ್ಲಿ (ಮಂಗಳೂರು ಮೇ 14-7-1984) ದುಡಿಯುವ ಮಹಿಳೆಯರ ಸಂಘಟನೆ ಕುರಿತಂತೆ ವಿಶೇಷ ಸಭೆ ನಡೆಯಿತು. ಸಮ್ಮೇಳನದ ಎಲ್ಲಾ ಕಲಾಪಗಳಲ್ಲಿ ಹಾಜರಾಗಿದ್ದ ಸಿಐಟಿಯು ಅಖಿಲ ಭಾರತ ಅಧ್ಯಕ್ಷ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್ ಬ್ಯುರೋ ಸದಸ್ಯ ಕಾಂ. ಬಿ. ಟಿ. ರಣದಿವೆ ಯವರು ದುಡಿಯುವ ಮಹಿಳೆಯರ, ಸಂಘಟನೆಯನ್ನು ಕುರಿತಂತೆ ಸಂಘಟನಾ ಪರಿಸ್ಥಿತಿ, ಸಮಸ್ಯೆಗಳು, ಅಗತ್ಯತೆಗಳನ್ನು ಮನಗಾಣಿಸಿದರು. ಮಹಿಳಾ ಚಳುವಳಿಯನ್ನು ಇಂದು ಪುರುಷ ವಿರೋಧಿಯಾಗಿಯೂ, ಇಲ್ಲವೇ ಛಿದ್ರಕಾರಿಯಾಗಿಯೂ ಮಾಡಲು ಪ್ರತಿಗಾಮಿ ಶಕ್ತಿಗಳು ಸಕ್ರಿಯವಾಗಿ ಪ್ರಯತ್ನಿಸುತ್ತಿರುವ ಇಂದಿನ ಸಂದರ್ಭದಲ್ಲಿ, ಕಾರ್ಮಿಕ ವರ್ಗದ ಚಳುವಳಿಯ ಭಾಗವಾಗಿ ದುಡಿಯುವ ಮಹಿಳೆಯರ ಚಳುವಳಿ ಬೆಳೆದು ಬರಬೇಕಾದ ಅನಿವಾರ್ಯ ಅಗತ್ಯವನ್ನು, ಅದರ ಮಹತ್ವವನ್ನು ಒತ್ತಿ ಹೇಳಿದರು. ಕಾರ್ಮಿಕ ವರ್ಗದ ಸಮರಶೀಲ ಸಂಘಟನೆಯಾಗಿರುವ ಸಿ.ಐ.ಟಿ.ಯು. ವಿನ ಮುಂದಿರುವ ಜವಾಬ್ದಾರಿಗಳನ್ನು ಗಮನಕ್ಕೆ ತಂದರು. ವಿಮರ್ಶೆ ಸ್ವವಿಮರ್ಶೆಯನ್ನೊಳಗೊಂಡ ಅವರ ಭಾಷಣದ ಮುಖ್ಯಾಂಶಗಳಿವು.

ದುಡಿಯುವ ಮಹಿಳೆಯರ ಸಮಸ್ಯೆ ಸಂಘಟನೆಯ ಬಗ್ಗೆ ಚರ್ಚೆ ನಡೆಸಿ ಪರಿಹಾರ ಕಂಡುಕೊಳ್ಳಲು ಸಭೆ ಸೇರಿದುದು ತುಂಬಾ ಸಂತೋಷದಾಯಕ. ಈ ಸಮ್ಮೇಳನದಲ್ಲಿ ಅವರ ಸಂಖ್ಯೆಯೂ ಅಧಿಕವಾಗಿದೆ. ನಾಲ್ಕೈದು ವರ್ಷಗಳ ಹಿಂದೆ ದುಡಿಯುವ ಮಹಿಳೆಯರ ಸಮಸ್ಯೆಯನ್ನು ನಿರ್ಲಕ್ಷಿಸುತ್ತಿದ್ದ ಬಗ್ಗೆ ಗಮನ ಸೆಳೆಯಲಾಯಿತು. ಆರ್ಥಿಕ ಬಿಕ್ಕಟ್ಟು ತೀವ್ರವಾಗುತ್ತಿರುವ ಈ ಸಂದರ್ಭದಲ್ಲಿ ಮಹಿಳಾ ಕಾರ್ಮಿಕರ ಒತ್ತಡ ಹೆಚ್ಚಾಗುತ್ತಿದೆ.

ಆಂಧ್ರ ಪ್ರದೇಶದಲ್ಲಿ ಹೊಸಯಂತ್ರಗಳ ಆಗಮನದಿಂದ ಸುಮಾರು 30,000 (ಮುವತ್ತು ಸಾವಿರ)ಕ್ಕೂ ಮಿಕ್ಕಿದ ಸಂಖ್ಯೆಯಲ್ಲಿ ಮಹಿಳೆಯರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಶಿವಕಾಶಿಯ ಕಾರ್ಖಾನೆಗಳಲ್ಲಿ ಹೆಂಗಸರು, ಮಕ್ಕಳನ್ನು ಒಳಗೊಂಡಂತೆ ಅತಿ ದೊಡ್ಡ ಸಂಖ್ಯೆಯಲ್ಲಿ ಕೆಲಸ ಕಳೆದುಕೊಂಡು ಬೀದಿಪಾಲಾಗುತ್ತಿದ್ದಾರೆ.

ಎರಡು ವರ್ಷಗಳಿಂದಲೂ ಮಹಿಳಾ ಕಾರ್ಮಿಕರ ಸಂಖ್ಯೆ ಕಡಿಮೆಯಾಗುತ್ತಾ ನಡೆದಿದೆ. ಮಹಿಳೆಯರನ್ನು ಕೆಲಸದಿಂದ ತೆಗೆದು ಹಾಕಲಾಗುತ್ತಿದೆ. ಕಾನೂನಿನ ಪ್ರಕಾರ ಮಹಿಳೆಯರಿಗೆ ದೊರಕಬೇಕಾಗಿರುವ ಹೆರಿಗೆ ಸೌಲಭ್ಯ, ಭತ್ಯೆ ಇತರೆ ಸೌಲಭ್ಯಗಳನ್ನು ಕೊಡಲು ಮಾಲಿಕ ವರ್ಗ ಧಿಕ್ಕರಿಸುತ್ತಿರುವುದೇ ಇದಕ್ಕೆ ಕಾರಣವಾಗಿದೆ. ತೋಟಗಾರಿಕೆಗಳ ದುಡಿಯುವ ಮಹಿಳೆಯರಿಗೆ ಸರಿಯಾದ ಕೂಲಿ ಇಲ್ಲ. ಶಿಕ್ಷಕ ನೌಕರ ಮಹಿಳೆಗೆ ಎರಡನೆ ದರ್ಜೆ ಸ್ಥಾನವಿದೆ. ಅವರಿಗೆ ಉದ್ಯೋಗದಲ್ಲಿ ಬಡ್ತಿ ಸಿಗುವುದಿಲ್ಲ.

ಇಂದು ಅತಿದೊಡ್ಡ ಸಂಖ್ಯೆಯಲ್ಲಿ, ಕಡಿಮೆ ಕೂಲಿಗೆ ದುಡಿಯುವ ಪರಿಸ್ಥಿತಿ ಬಂದಿದೆ. ಮಹಿಳೆಯರು ಬೀಡಿಕಟ್ಟುವಂತಹ ಕೆಲಸ ಮಾಡಬೇಕಾಗಿದೆ. ಈ ಕೈಗಾರಿಕೆಯಲ್ಲಿಯೂ ಕೂಡ ಹಲವೆಡೆಗಳಲ್ಲಿ ಹೆಂಗಸರಿಗೆ ಗಂಡಸರಿಗಿರುವಷ್ಟು ಸಮಾನ ಕೂಲಿ ಇಲ್ಲ. ಹೆಂಗಸರಿಗೆ ಎಷ್ಟಾದರೂ ಕೂಲಿಕೊಟ್ಟರೂ ನಡೆಯುತ್ತದೆಂಬ ಭಾವನೆ ಇದೆ. ಈ ಪರಿಸ್ಥಿತಿ ಹುಟ್ಟಲು ಕಾರಣಗಳುಂಟು. ಹಿಂದೂ, ಮುಸ್ಲಿಂ ಅಥವಾ ಕ್ರಿಶ್ಚಿಯನ್ ಧಾರ್ಮಿಕ ಸಮಾಜದಲ್ಲಿ ಹೆಣ್ಣಿಗೆ ಅವರದೇ ಆದ ಸ್ಥಾನಮಾನ ಕೊಡದೇ ಇರುವುದು. ಕುಟುಂಬದಲ್ಲಿ ಹೆಣ್ಣಿನ ಸ್ಥಾನವನ್ನು ನಿರ್ಲಕ್ಷ್ಯ ಮಾಡಲಾಗಿದೆ. ಬಹುಶಃ ನಿಮಗೆ ತಿಳಿದಿರಬಹುದು. ಈ ತಾರತಮ್ಯ ಕೇವಲ ಧಾರ್ಮಿಕ ವ್ಯಾಪ್ತಿಯ ಕುಟುಂಬಗಳಲ್ಲಷ್ಟೇ ಅಲ್ಲ ಹಲವಾರು ಟ್ರೇಡ್‌ಯೂನಿಯನ್ ನಾಯಕರಲ್ಲಿಯೂ ಇದೆ. ಮೂಲಭೂತವಾಗಿ ಇದು ಊಳಿಗಮಾನ್ಯ ಅವಶೇಷಗಳನ್ನೊಳಗೊಂಡಿರುವ ಸಾಮಾಜಿಕ ಪಿಡುಗು. ಮಹಿಳಾ ಕಾರ್ಮಿಕರ ಚಳುವಳಿಯು ದೇಶದ ಕಾರ್ಮಿಕರ ಚಳುವಳಿಯೊಂದಿಗೆ ಸೇರಿ ಮುನ್ನಡೆದಾಗಲೇ ಈ ತಾರತಮ್ಯ ತೊಡೆದು ಹಾಕಲು ಸಾಧ್ಯವಿದೆ.

ಹೆಂಗಸು ದುಡಿದು ಸಂಪಾದಿಸಿದರೂ ಮನೆಯ ಕೆಲಸಗಳನ್ನೂ ಮಾಡಬೇಕಾಗುತ್ತದೆ. ಗಂಡ ಸಹಕರಿಸುತ್ತಿಲ್ಲ. ಈ ರೀತಿಯ ಅಸಮಾನತೆಯು ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳಾದ ಅಮೇರಿಕಾ, ಇಂಗ್ಲೆಂಡ್, ಜಪಾನ್ ಮುಂತಾದೆಡೆಗಳಲ್ಲಿ ಕಂಡುಬರುತ್ತದೆ. ಆದರೆ ಸಮಾಜವಾದೀ ದೇಶಗಳಲ್ಲಿ ಈ ಪರಿಸ್ಥಿತಿ ಇಲ್ಲ. ಗಂಡು ಹೆಣ್ಣುಗಳ ನಡುವೆ ಸಮಾನ ಸ್ಥಾನ-ಮಾನವಿದೆ. ಏಕೆಂದರೆ ಅದು ಶ್ರಮಿಕವರ್ಗದ ಸರ್ವಾಧಿಕಾರವಿರುವ, ಸಮಾನತೆ ಇರುವ ಸಮಾಜ ವ್ಯವಸ್ಥೆ ಅಲ್ಲಿದೆ. ಅಲ್ಲಿಯ ಎಲ್ಲ ರಂಗದ ವಿದ್ಯಾಮಾನಗಳಲ್ಲಿ ಗಂಡು—ಹೆಣ್ಣಿನ ಸಮಭಾಗಿತ್ವ, ಸಮಾನತೆ ಇದೆ.

ದುಡಿಯುವ ಮಹಿಳೆಯರ ಪ್ರಶ್ನೆಯನ್ನು ಟ್ರೇಡ್ ಯೂನಿಯನ್ ಚಳುವಳಿ ನಿರ್ಲಕ್ಷಿಸಿದೆ. ಈ ವಿಭಾಗದ ನಾಯಕತ್ವವನ್ನು ರೂಪಿಸಲಾಗಿಲ್ಲ. ಈ ಪರಿಸ್ಥಿತಿ ಬರೀ ಭಾರತದಲ್ಲಿ ಮಾತ್ರವಲ್ಲ ಇಂಗ್ಲೆಂಡ್, ಫ್ರಾನ್ಸ್ ಮುಂತಾದ ಬಂಡವಾಳಶಾಹಿ ರಾಷ್ಟ್ರಗಳಲ್ಲಿರುವುದು ಅನುಭವಕ್ಕೆ ಬಂದಿದೆ. ಅಲ್ಲಿಯೂ ಮಹಿಳೆಯರು ಟ್ರೇಡ್ ಯೂನಿಯನ್‌ಗಳು ತಮ್ಮ ಬಗ್ಗೆ ಗಮನಹರಿಸಲು ಕೇಳುತ್ತಿದ್ದಾರೆ.

ಒಮ್ಮೆ ಮೀಟಿಂಗ್‌ಗೆ ಬಂದ ಹೆಂಗಸು ಮತ್ತೆ ಬರಲಾರರು ಎನ್ನುವ ಒಂದು ಆರೋಪವಿದೆ. ಇಷ್ಟನ್ನೇ ಹೇಳಿ ಸುಮ್ಮನೇ ಕುಳಿತುಕೊಳ್ಳುವುದು ಅವರನ್ನು ಹಿಂದಕ್ಕೆ ತಳ್ಳುವ ಅಂಶವಾಗುತ್ತದೆ. ಯಾಕೆ ಈ ಪರಿಸ್ಥಿತಿ ಇದೆ ? ಮಹಿಳೆಯು ಸಂಪಾದನೆಗಾಗಿ ದುಡಿಯಬೇಕಿದೆಯಲ್ಲದೇ ಮನೆಯಲ್ಲಿಯೂ ದುಡಿಯಬೇಕಿರುವಾಗ ಅಂತಹ ಮಹಿಳೆಯು ಸಭೆಗಳಿಗೆ ಹಾಜರಾಗಲು ತೊಂದರೆಯಾಗುವುದು. ಸಭೆಯನ್ನು ಕರೆಯುವಾಗ ಸಮಯದ ಹೊಂದಾಣಿಕೆ ಮಾಡಿ ಮಹಿಳೆಯು ಹಾಜರಾಗುವಂತೆ ನೋಡಿಕೊಂಡು ಅವರಲ್ಲಿ ನಾಯಕತ್ವ ರೂಪುಗೊಳ್ಳುವಂತೆ ಪ್ರಯತ್ನಿಸಬೇಕು.

ಇಂದು ಯೂರೋಪಿನಲ್ಲಿ ಮಹಿಳೆಯರ ಸಭೆ ಕರೆಯುವಾಗ ಮಹಿಳೆಯರಿಗೆ ಅನುಕೂಲಕರವಾದ ಸಮಯ ನೋಡಿ ಸಭೆ ಇಟ್ಟುಕೊಳ್ಳುವರು. ಹೀಗಾಗಿ ಅಲ್ಲಿ ಮಹಿಳಾ ನಾಯಕತ್ವ ರೂಪಿತವಾಗಲು ಸಾಧ್ಯವಾಗುತ್ತಿದೆ. ಅದ್ದರಿಂದ ಹಲವಾರು ಸೌಲಭ್ಯಗಳನ್ನು ಮನಗಂಡು 1979ರಲ್ಲಿ ಒಮ್ಮೆ, 1984 ರಲ್ಲಿ ಒಮ್ಮೆ ದೆಹಲಿಯಲ್ಲಿ ಮಹಿಳಾ ಸಮಾವೇಶ ನಡೆಯಿತು. ಎರಡೂ ಸಮಾವೇಶಗಳಲ್ಲಿಯೂ ಮಹಿಳೆಯರು ತುಂಬಾ ಉತ್ಸಾಹತೆಯಿಂದ ಭಾಗವಹಿಸಿ, ಕಾರ್ಯಕ್ರಮ ರೂಪಿಸಿದ್ದಾರೆ.

ಸಿ. ಐ. ಟಿ ಯು. ಸಮಾನ ಕೆಲಸ, ಸಮಾನ ಕೂಲಿಗಾಗಿ ಮತ್ತು ಪ್ರತ್ಯೇಕ ಮನೋಭಾವನೆಯನ್ನು ಕೈಬಿಡಬೇಕೆಂದು ಹೋರಾಟ ನಡೆಸುತ್ತದೆ. ತೋಟಗಾರಿಕೆಯಲ್ಲಿ ಈ ತತ್ವಕ್ಕೆ ಮಾಲೀಕರು ಒಪ್ಪಂದ ಮಾಡಿಕೊಂಡಿದ್ದಾಗ್ಯೂ ಕಡಿಮೆ ಕೂಲಿಯ ಕೆಲಸವನ್ನೆ ಕೊಡುತ್ತಿದ್ದಾರೆ. ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ದುಡಿಯುವ ಕೈಗಾರಿಕೆಯಲ್ಲಿನ ಯಾವುದೇ ಸಮಿತಿಗಳಲ್ಲಿ ಮಹಿಳಾ ಸದಸ್ಯತ್ವವಿರುವುದಿಲ್ಲ, ನಾಯಕತ್ವವೂ ಇರುವುದಿಲ್ಲವೆಂಬುದನ್ನು ಸಿ. ಐ. ಟಿ. ಯು ಗಮನಿಸಿದೆ.

ಎರಡು ವರ್ಷಗಳ ಹಿಂದೆ ಕೇರಳದಲ್ಲಿ ಹುರಿ ತಯಾರಿಸುವ ಕೈಗಾರಿಕೆಯಲ್ಲಿ ಮಹಿಳಾ ಪ್ರಾತಿನಿಧ್ಯವಿರಲಿಲ್ಲ. ಆದರೆ ಇಂದು ಪರಿಸ್ಥಿತಿ ಸುಧಾರಿಸುತ್ತಿದೆ. ನಮ್ಮ ಸತತ ಪರಿಶ್ರಮದಿಂದ ಸಿ. ಐ. ಟಿ. ಯು ವಿನಲ್ಲಿ ಮಹಿಳಾ ನಾಯಕತ್ವ ರೂಪುಗೊಳ್ಳಲು ಸಾಧ್ಯವಾಗುತ್ತದೆ. ಇದು ನಾವಿನ್ನು ಆರಂಭ ಮಾಡಿದ್ದೇವೆ. ತಲುಪ ಬೇಕಿರುವ ಗುರಿ ಬಹುದೂರ ಇದೆ. ಮುಂದೆ ಹೋಗುವ ದಿಶೆಯಲ್ಲಿ ನಮ್ಮ ಕಾರ್ಯಕರ್ತ ಸಂಗಾತಿಗಳ ತಿಳುವಳಿಕೆಯನ್ನು ಹೆಚ್ಚಿಸುವ ಜವಾಬ್ದಾರಿ ಇದೆ. ಅಲ್ಲದೇ ದುಡಿಯುವ ಮಹಿಳೆಯರೂ ಕೂಡ ಸ್ವಯಂ ಆಗಿ ಪ್ರಾತಿನಿಧ್ಯ ಪಡೆಯಲು ಮುಂದಾಗಬೇಕಿದೆ.

ನಮ್ಮ ಚಳುವಳಿಯಲ್ಲಿ ಒಂದನ್ನು ಗಮನಿಸಿದ್ದೆಂದರೆ ನಾವು ನಡೆಸುವ ಮುಷ್ಕರ, ಧರಣಿ, ಪಿಕೆಟಿಂಗ್. ಕಾರ್ಯಕ್ರಮಗಳಲ್ಲಿ ಸಾವಿರ ಗಟ್ಟಲೇ ಮಹಿಳೆಯರು ಭಾಗವಹಿಸುತ್ತಾರೆ. ಆದರೆ ಮುಂದಾಳುತನ ಕೊಡಲು ಹಿಂಜರಿಯುತಾರೆ. ಆದುದರಿಂದಲೇ ಸಿ. ಐ. ಟಿ. ಯು ವಿನಲ್ಲಿ ಮಹಿಳೆಯರಿಗಾಗಿಯೇ "ಉಪಸಮಿತಿ" ಇದ್ದು ಅವರ ಸಮಸ್ಯೆಗಳ ಬಗ್ಗೆ ಕೂಲಂಕುಶವಾಗಿ ಅವಲೋಕಿಸಿ ನಾಯಕತ್ವರೂಪಿಸಲು ಮುಂದಾಗಲಾಗುತ್ತಿದೆ. ದುಡಿಯುವ ಮಹಿಳೆಯು "ದುಡಿಯುವ ವರ್ಗದ" ಒಂದು ಭಾಗ. ದುಡಿಯುವ ವರ್ಗದ ಚಳುವಳಿಯೊಂದಿಗೆ ಅವರ ಚಳುವಳಿ ಮುನ್ನಡೆಯಬೇಕು. ತನ್ಮೂಲಕ ನಾಯಕತ್ವಕ್ಕೆ ಮುಂದಾಗಬೇಕು.

ಈ ದೇಶದಪ್ರಧಾನ ಮಂತ್ರಿಯವರೇ ಮಹಿಳೆಯಾಗಿರುವಾಗ ದುಡಿಯುವ ಮಹಿಳೆಯನ್ನು ಯಾಕೆ ನಿರ್ಲಕ್ಷ್ಯ ಮಾಡಲಾಗುತ್ತದೆ ಎಂದು ಕೆಲವರು ಕೇಳಬಹುದು. ಮಹಿಳೆಯರ ಮೇಲೆ ನಿರಂತರವಾಗಿ ನಡೆಯುತ್ತಿರುವ ದೌರ್ಜನ್ಯ ಮತ್ತು, ನಿರ್ಲಕ್ಷತನದ ಪ್ರಶ್ನೆ ಗಂಡಸು ಅಥವ ಹೆಂಗಸು ಎನ್ನುವ ನಡುವಿನ ಅಂತರದಿಂದ ನಿರ್ಧರಿತವಾಗುವುದಿಲ್ಲ. ಭೂಮಾಲಿಕ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ಇದಕ್ಕೆ ಕಾರಣವಾದ್ದು ಇಲ್ಲಿನ ಆಳುವ ವರ್ಗದ ಆರ್ಥಿಕ ವೈಷಮ್ಯವು ಇದನ್ನು ನಿರ್ಧರಿಸುತ್ತದೆ. ಇಂದಿರಾ ಗಾಂಧಿಯವರು ದುಡಿಯುವ ವರ್ಗದ ಮಹಿಳೆಯರ ಪ್ರತಿನಿಧಿಯಲ್ಲ. ಆಕೆ ಭೂಮಾಲಿಕ-ಬಂಡವಾಳಶಾಹಿಗಳ ಪ್ರತಿನಿಧಿ ಆಫೀಸುಗಳಲ್ಲಿ, ಕಾರ್ಖಾನೆಗಳಲ್ಲಿ ಮಹಿಳೆ ಅನುಭವಿಸುತ್ತಿರುವ ಅಸಹನೀಯ ಪರಿಸ್ಥಿತಿ, ಅವಮಾನಗಳು ಇಂದಿರಾಗಾಂಧಿಯ ನೋವುಗಳಲ್ಲ. ಇಂಗ್ಲೆಂಡ್‌ನ ಪ್ರಧಾನಿ ಮಾರ್ಗರೇಟ್ ಥ್ಯಾಚರ್ ಹೆಣ್ಣಾಗಿದ್ದರೂ ಹೆಣ್ಣಿನ ಸಮಾನತೆಯ ಅಂಶ ಅಲ್ಲಿ ನಿರ್ಲಕ್ಷಿಸಲ್ಪಟ್ಟಿದೆ ಏಕೆ ?. ಥ್ಯಾಚರ್ ಮಹಿಳಾ ಪ್ರತಿನಿಧಿಯಲ್ಲ. ಬಂಡವಾಳದಾರರ ಪ್ರತಿನಿಧಿ. ಹೀಗಿರುವುದರಿಂದ ಈ ಅಸಮಾನತೆಯ ಸಮಾಜವ್ಯವಸ್ಥೆಯನ್ನ ನಾಶಮಾಡಿ, ಸಮಾಜವಾದೀ ವ್ಯವಸ್ಥೆ ರೂಪಿಸಲು ಹೋರಾಟ ನಡೆಸಬೇಕಾಗಿರುವುದು ಮಹಿಳೆಯರ ಮುಂದಿರುವ ಕರ್ತವ್ಯವಾಗಿದೆ.

ನಮ್ಮ ದೇಶದಲ್ಲಿ ಇಂದು ಮಹಿಳೆಯರನ್ನು ತಾರತಮ್ಯ ದೃಷ್ಟಿಕೋನದಿಂದ ನೋಡಲಾಗುತ್ತಿದೆ. ಅವಳು ಹೆಣ್ಣು ಎಂದೂ, ಸಾಮಾನ್ಯ ಪ್ರಜೆಯೆಂದೂ. ಮಹಿಳಾ ಕಾರ್ಮಿಕಳೆಂದೂ ತಾರತಮ್ಯ ತೋರಿಸಲಾಗುತ್ತಿದೆ. ಇದಕ್ಕೆ ಸಾವಿರಾರು ವರ್ಷಗಳ ಐತಿಹಾಸಿಕ ಹಿನ್ನೆಲೆ ಇದೆ. ಪ್ರಜಾಸತ್ತಾತ್ಮಕ ಚಳುವಳಿಯೊಂದಿಗೆ ಈ ಪಿಡುಗುಗಳ ವಿರುದ್ಧ ಹೋರಾಡಲೇ ಬೇಕು. ಕಾರ್ಮಿಕವರ್ಗದ ಚಳುವಳಿಯೊಂದಿಗೆ ಈ ಹೋರಾಟ ಬೆಸೆಯಬೇಕು ಇದಲ್ಲದೇ ನಾಲ್ಕನೆಯ ಪಿಡುಗಿನ ವಿರುದ್ಧವೂ ಹೋರಾಟ ನಡೆಸಬೇಕು. ಅದೆಂದರೆ ಮಹಿಳಾ ಸಮಸ್ಯೆಗಳನ್ನು ಗಂಡಸರು ನಿರ್ಲಕ್ಷಿಸುತ್ತಿರುವುದರ ವಿರುದ್ಧ ಹೋರಾಡಬೇಕು. ಇದು ಟ್ರೇಡ್‌ಯೂನಿಯನ್‌ನ ಭಾಗವಾಗಿರುವಂತೆ ಪ್ರಯತ್ನಿಸಬೇಕು.

ಒಂದು ಸಂತೋಷದ ಸಂಗತಿಯೆಂದರೆ ಕರ್ನಾಟಕದ ಸಿ.ಐ.ಟಿ ಯು ಮುಂದಾಳತ್ವವು ಈ ಪ್ರಶ್ನೆಯನ್ನು ಗಂಭೀರವಾಗಿ ತೆಗೆದುಕೊಂಡಿದೆ. ಈ ಬಗ್ಗೆ ನಾನು ಆಶಾದಾಯಕ ಭಾವನೆಯನ್ನು ಹೊಂದಿದ್ದೇನೆ. ನಿಮ್ಮ ಬೇಡಿಕೆಗಳು ಶಿಶುಪಾಲನೆಗೆ ಸಂಬಂಧಿಸಿದಂತಹ ಸಣ್ಣದೇ ಇರಬಹುದು. ಅದನ್ನು ಈಡೇರಿಸಲು ನೀವು ಒತ್ತಾಯಿಸಬೇಕು. "ಸಿ. ಐ. ಟಿ ಯು" ವಿನ ರಾಜ್ಯನಾಯಕತ್ವ ಗಮನ ಹರಿಸಲು ಹಿಂದುಳಿವರೆ ಕೇಂದ್ರಸಮಿತಿಯು ಗಮನಹರಿಸಿ ಪರಿಹಾರ ದೊರಕಿಸಲು ಸಹಕರಿಸುತ್ತದೆ ನಿಮ್ಮ ಹೆಜ್ಜೆ ಉತ್ತಮ ಬೆಳವಣಿಗೆಗೆ ಸಹಾಯಕವಾಗುವುದೆಂದು ನನಗೆ ಭರವಸೆ ಇದೆ ಚಳುವಳಿ ಮುಂದುವರಿಸಿ. ಯಶಸ್ಸು ದೊರೆಯಲಿ.

ಸರ್ಕಾರಗಳ ವಜಾ – ಕೇರಳದಿಂದ ಕಾಶ್ಮೀರದವರೆಗೆ

# 'ಉರುಳಿಸುವ ಆಟ'ದ ಕಾಲು ಶತಮಾನ

ಕಾ॥ ಇ. ಎಂ. ಎಸ್. ನಂಬೂದಿರಿಪಾದ್

ಪ್ರಜಾಪ್ರಭುತ್ವ ರೀತಿಯಲ್ಲಿ ಚುನಾಯಿತಗೊಂಡು ಆಡಳಿತ ನಡೆಸುತ್ತಿದ್ದ ಡಾ॥ ಫರೂಕ್ ಅಬ್ದುಲ್ಲಾ ನೇತೃತ್ವದ ನ್ಯಾಶನಲ್ ಕಾನ್‌ಫರೆನ್ಸ್ ಸರ್ಕಾರವನ್ನು ವಜಾ ಮಾಡಿ ಪಕ್ಷಾಂತರಿ ಷಾ ಮತ್ತು ಅವರ ಸಂಗಡಿಗರನ್ನು ಅಧಿಕಾರದ ಕುರ್ಚಿಯಲ್ಲಿ ಕೂರಿಸಿದ ಕಾಶ್ಮೀರದ ರಾಜ್ಯಪಾಲ ಜಗಮೋಹನ್ ಅವರ ಸಂವಿಧಾನ ವಿರೋಧೀ ನಡತೆ ಅದರಿಂದುಂಟಾದ ಬೆಳವಣಿಗೆಗಳು 25 ವರ್ಷಗಳ ಹಿಂದೆ-ಜುಲೈ 31, 1959 ರಂದು ಕೇರಳದಲ್ಲಿ ನಡೆದ ಘಟನೆಯನ್ನು ನನ್ನ ನೆನಪಿಗೆ ತರುತ್ತಿದೆ.

ಡಾ॥ ಅಬ್ದುಲ್ಲಾರಂತೆ ಆಗ ಚುನಾಯಿತ ಸರ್ಕಾರವೊಂದರ ಮುಖ್ಯಮಂತ್ರಿಯಾಗಿದ್ದ ನನ್ನನ್ನು ಸಹ ವಜಾ ಮಾಡಲಾಯಿತು. ಅಬ್ದುಲ್ಲಾರಂತೆಯೇ ನಾನೂ ಸಹ ಅಧಿಕಾರಕ್ಕೆ ಬಂದ ಕ್ಷಣದಿಂದಲೇ ಕೇಂದ್ರ ಸರ್ಕಾರದ ಆಕ್ರಮಣವನ್ನು ಸತತವಾಗಿ ಎದುರಿಸಬೇಕಾಗಿತ್ತು.

ಅಧಿಕಾರ ವಹಿಸಿಕೊಂಡ ಕೆಲವೇ ಗಂಟೆಗಳಲ್ಲಿ ದೇಶಾದ್ಯಂತ ಕಾಂಗ್ರೆಸ್ ನಾಯಕರು ಮುಖ್ಯವಾಗಿ ಕೇರಳದಲ್ಲಿ, ಕೇರಳ ಜನತೆ ಹಾಗೂ ಅವರ ಆಸ್ತಿಪಾಸ್ತಿಗಳಿಗೆ "ಅಭದ್ರತೆ"ಯ ಭಾವನೆ ಉಂಟಾಗಿದೆಯೆಂಬುದನ್ನು "ಕಂಡು ಹಿಡಿದು" ಬೊಬ್ಬೆಯಿಡಲಾರಂಭಿಸಿದರು. ಏಕೆಂದರೆ ರಾಜ್ಯದ ಅಧಿಕಾರ ಕಮ್ಯುನಿಸ್ಟರ ಕೈಗೆ ಹೋಗಿ ಬಿಟ್ಟಿತು! ಇವರೊಂದಿಗೆ ವಿವಿಧ ಜನತಾ ನಾಯಕರೂ, ಕ್ರೈಸ್ತ ಚರ್ಚುಗಳೂ, ನಾಯರ್ ಕುಲದ ಸಿರಿವಂತರು, ಮುಸ್ಲಿಂ ಲೀಗ್, ಹಿಂದುಳಿದ ಜಾತಿಗಳ ನಾಯಕರ ಒಂದು ವಿಭಾಗ ಇನ್ನಿತರರು ಸೇರಿಕೊಂಡರು. "ಕಮ್ಯೂನಿಸ್ಟ್ ದುರಾಡಳಿತದ ವಿರುದ್ಧ ವಿಮೋಚನಾ ಹೋರಾಟ" ದ ಮುಖಾಂತರ ಇದೇ "ಸಭ್ಯ ಜನರ" ಕೂಟವು ಕೇಂದ್ರ ಸರಕಾರದ ನೆರವಿನೊಂದಿಗೆ ಸರ್ಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಳ್ವಿಕೆಯನ್ನು ತಂದುಕೊಂಡಿತು.

## ಮಹತ್ತ್ವದ ವ್ಯತ್ಯಾಸಗಳು

ಕೇರಳ ಮತ್ತು ಕಾಶ್ಮೀರ ಸರ್ಕಾರಗಳ ವಜಾ ಒಂದು ರೀತಿಯಲ್ಲಿ ಒಂದನ್ನೊಂದು ಹೋಲುತ್ತಿದ್ದರೂ ಅನೇಕ ವಿಷಯಗಳಲ್ಲಿ ವ್ಯತ್ಯಾಸಗಳಿವೆ. ಸಣ್ಣಪುಟ್ಟವುಗಳನ್ನುಳಿದು ರಾಜಕೀಯಕ್ಕೆ ಸಂಬಂಧಿಸಿದ ಎರಡು ವ್ಯತ್ಯಾಸಗಳ ಬಗ್ಗೆ ಇಲ್ಲಿ ಚರ್ಚಿಸುತ್ತೇನೆ. ಈ ಎರಡೂ ಕೂಡ ಕಳೆದ 25 ವರ್ಷಗಳಲ್ಲಿ ದೇಶದ ರಾಜಕೀಯ ಪರಿಸ್ಥಿತಿಯಲ್ಲಿ ಸಂಭವಿಸಿದ ಮಹತ್ತರ ಬದಲಾವಣೆಗಳನ್ನು ಸೂಚಿಸುತ್ತವೆ.

ಕಾಂಗ್ರೆಸ್ ಪಕ್ಷವು ಕೇರಳದ ನಮ್ಮ ಸರ್ಕಾರದ ವಿರುದ್ಧ "ವಿಮೋಚನಾ ಹೋರಾಟ" ಪ್ರಾರಂಭಿಸಿದಾಗ ಇಡೀ ದೇಶದಲ್ಲಿ ಕೇರಳವನ್ನುಳಿದು ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತ್ತು ಇದೊಂದೆ ಅಲ್ಲ ಕಾಂಗ್ರೆಸ್ ಪಕ್ಷವು ಶೀಘ್ರ ಸವೆತದ ಹಾದಿಯಲ್ಲಿದ್ದರೂ ಜನತೆಯ ನಡುವೆ ಆಳವಾಗಿ ಬೇರು ಬಿಟ್ಟ ರಾಷ್ಟ್ರೀಯ ಪಕ್ಷವಾಗಿತ್ತು. ಆಡಳಿತ ಶಕ್ತಿ ಮತ್ತು ಅಧಿಕಾರಗಳನ್ನು ಜನತೆಯ ರಾಜಕೀಯ ಮತ್ತು ಸಂಘಟನಾ ಸಂಬಂಧಗಳೊಂದಿಗೆ ಸಂಯೋಜಿತಗೊಳಿಸುವ, ಜನತೆಯ ಭಾವನೆಗಳನ್ನು ಅಂಕೆಯಲ್ಲಿಟ್ಟುಕೊಳ್ಳುವ ಶಕ್ತಿಯನ್ನು ಹೊಂದಿತ್ತು ಮತ್ತು ನೆಹರೂ ಹೆಸರಿಸಿದ ಹಾಗೆ ಕಾಂಗ್ರೆಸ್ಸೇತರ, ರಾಜ್ಯ ಸರ್ಕಾರದ ವಿರುದ್ಧ "ಸಾಮೂಹಿಕ ಬಂಡಾಯ" ವನ್ನು ಸಂಘಟಿಸಲಾಯಿತು.

"ಕಮ್ಯೂನಿಸ್ಟ್ ದುರಾಡಳಿತ"ದ ವಿರುದ್ಧ ಉದ್ದೀಪನಗೊಳಿಸಿದ ಭಾವನೆಗಳು ಅತ್ಯಂತ ಹಿಂದುಳಿದ ಜಾತಿ ಮತ್ತು ಕೋಮು ಪೂರ್ವಾಗ್ರಹಗಳು, ಮಾತ್ರವಲ್ಲದೆ ಶೋಷಿತರ ಪಕ್ಷ ಮತ್ತು ಸರಕಾರದ ವಿರುದ್ಧ ಶೋಷಕ ವರ್ಗಗಳ ವೈಷಮ್ಯಗಳಾಗಿದ್ದರೂ ಕೂಡಾ ಇವಕ್ಕೆ ದೇಶದ ಪ್ರಮುಖ ರಾಷ್ಟ್ರೀಯ ಸಂಘಟನೆಯ "ಜಾತ್ಯತೀತ, ಪ್ರಜಾಪ್ರಭುತ್ವವಾದಿ ಹಾಗೂ ಸಮಾಜವಾದಿ" ನಾಯಕತ್ವದ ಪ್ರತಿಷ್ಠೆ ಮತ್ತು ಅಧಿಕಾರದ ಬೆಂಬಲ ಈ ಆಂದೋಲನಕಾರರಿಗಿತ್ತು.

## ಯುಕ್ತಿಯಿಂದ ಆಡಳಿತ

ಆಳುವ ಕಾಂಗ್ರೈ ಪಕ್ಷ ಈಗ ಆ ಸ್ಥಿತಿಯಲ್ಲಿಲ್ಲ, ದೇಶದಲ್ಲಿ 25 ವರ್ಷಗಳ ದುರಾಡಳಿತದಿಂದಾಗಿ ಮತ್ತು ಆಂತರಿಕ ಕಲಹಗಳಿಂದಾಗಿ ಆಡಳಿತ ಪಕ್ಷವು ಆಡಳಿತ ಮಟ್ಟದಲ್ಲಿ ಯುಕ್ತಿಯಿಂದ, ಮತ್ತು ಅಪಾರ ಹಣಬಲದಿಂದ ಪಕ್ಷಾಂತರಗಳನ್ನು ಸಂಘಟಿಸುವ ಮೂಲಕ ಕೆಲವು ವಾರಗಳ ಹಿಂದೆ ಸಿಕ್ಕಿಂ ಮತ್ತು ಈಗ ಕಾಶ್ಮೀರದಲ್ಲಿ ಮಾಡಿರುವಂತೆ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕಾದ ಪರಿಸ್ಥಿತಿ ಒದಗಿದೆ. ಸಿಕ್ಕಿಂನಗಲೀ ಅಥವ ಕಾಶ್ಮೀರದಲ್ಲಾಗಲೀ ಕೇರಳದಲ್ಲಿ ಸಂಘಟಿಸಿದ ಹಾಗೆ "ಸಾಮೂಹಿಕ ಬಂಡಾಯ" ವನ್ನು ಸಂಘಟಿಸುವುದು ಅವರಿಂದ ಸಾಧ್ಯವಿರಲಿಲ್ಲ.

25 ವರ್ಷಗಳ ಹಿಂದೆ ಕೇರಳದಲ್ಲಿ ಅನುಸರಿಸಿದ ವಿಧಾನಕ್ಕೂ ಈಗ ಕಾಶ್ಮೀರದಲ್ಲಿ ಅನುಸರಿಸುತ್ತಿರುವುದಕ್ಕೂ ತುಲನೆ ಮಾಡೋಣ. ಕೇರಳ ಸರ್ಕಾರವನ್ನು ವಜಾ ಮಾಡುವ ಮೊದಲು ಮತ್ತು ನಂತರ ಜನರು ಕಾಂಗ್ರೆಸ್ ಮತ್ತು ಅವರ ಮಿತ್ರರ ಹಿಂದೆ ಅಣಿ ನೆರೆದಿದ್ದರು. ಹಾಗೇ ಕಮ್ಯೂನಿಸ್ಟ್ ಮತ್ತು ಅದರ ಮಿತ್ರಪಕ್ಷಗಳ ಹಿಂದೆಯೂ ಸೇರಿದರು. ಜೂನ್ 1959 ರಲ್ಲಿ "ವಿಮೋಚನಾ ಹೋರಾಟ" ಪ್ರಾರಂಭಗೊಂಡು 1960 ರ ಫೆಬ್ರವರಿಯಲ್ಲಿ ಚುನಾವಣೆಗಳು ನಡೆಯುವವರೆಗೆ ಕಾಂಗ್ರೆಸ್ ಪರವಾಗಿಯೂ, ಕಮ್ಯೂನಿಸ್ಟರ ಪರವಾಗಿಯೂ ಬೃಹತ್ ಮೆರವಣಿಗೆ, ಪ್ರದರ್ಶನಗಳು ನಡೆದಿದ್ದವು. ನಾವು ರಾಜ್ಯದಲ್ಲಿ ಎಲ್ಲಿ ಬೇಕಾದರೂ ಸ್ವತಂತ್ರವಾಗಿ ತಿರುಗಾಡುತ್ತಿದ್ದೆವು. ಎರಡು ಕಡೆಯವರೂ ಜನತೆಯನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು.

ಆದರೆ ಈಗ ಜಮ್ಮು ಕಾಶ್ಮೀರದಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಅದರ ರಾಜ್ಯ ಮತ್ತು ಕೇಂದ್ರ ಸರ್ಕಾರ 25 ವರ್ಷಗಳ ಹಿಂದೆ ನಾವು ಹೋದಂತೆ ಡಾ॥ ಅಬ್ದುಲ್ಲಾ ಮತ್ತು ಅವರ ಪಕ್ಷ ಜನತೆಯ ನಡುವೆ ಹೋಗಲು ಅನುಮತಿ ನೀಡುತ್ತಿಲ್ಲ. ಅಬ್ದುಲ್ಲಾ ಸರ್ಕಾರವನ್ನು ಉರುಳಿಸಿದ ಕ್ಷಣದಿಂದಲೇ ರಾಜಧಾನಿ ಶ್ರೀನಗರ ಕರ್ಫ್ಯೂನ ಅಡಿಯಲ್ಲಿದೆ. ಸಾಂಪ್ರದಾಯಿಕವಾಗಿ ಜುಲೈ 13 ರಂದು ಆಚರಿಸುವ "ಹುತಾತ್ಮರ ದಿನಾಚರಣೆ" ಯನ್ನು ಆಚರಿಸಲೂ ಸಹ ಜನತೆಗೆ ಅವಕಾಶ ನೀಡಲಿಲ್ಲ.

ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಲು ನಾನು ಮತ್ತು ಐವರು ವಿರೋಧ ಪಕ್ಷಗಳ ನಾಯಕರು ಶ್ರೀನಗರಕ್ಕೆ ತೆರಳಿದೆವು. ಆದರೆ ನಮ್ಮನ್ನು ಗೃಹ ಬಂಧನದಲ್ಲಿರಿಸಲಾಯಿತು ಕೆಲವು ವರದಿಗಾರರಿಗೂ ಸಹ ಇದೇ ಪರಿಸ್ಥಿತಿಯೊದಗಿತು ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಲು ನಿರ್ಬಂಧಿಸಿದ್ದು ಇದೇ ಮೊದಲ ಸಲ ಎಂದು ಕೆಲವರು ನನಗೆ ಹೇಳಿದರು.

ಷಾ-ಎನ್-ಷಾ ಹೋಟೆಲಿನ ಕೋಣೆಗಳಲ್ಲಿ ನಾನು ಮತ್ತು ನನ್ನ ಐವರು ಗೆಳೆಯರು ಕಳೆದ 48 ಗಂಟೆಗಳು ಜಿ. ಎಂ. ಷಾ ರವರ ಸರ್ಕಾರವು ತಲುಪಿದ್ದ ಸಂಪೂರ್ಣ ಏಕಾಂಗಿತನದ ಸುಳಿವನ್ನು ನೀಡಿತು.

ನಾವು ಶ್ರೀನಗರಕ್ಕೆ ಹೊರಟಿದ್ದ ಉದ್ದೇಶ ನಾಶವಾಯಿತು. ಇಡೀ ದೇಶದ ಜಾತ್ಯತೀತ ಪ್ರಜಾಪ್ರಭುತ್ವದ ಸಂಕೇತವಾಗಿದ್ದ ಸುಂದರ ಹಾಗೂ ಧೀರೋದಾತ್ತ ನಗರದ ಜನತೆಯನ್ನು ನಾವು ಭೇಟಿ ಮಾಡಲಾಗಲಿಲ್ಲ. ನಾವು ಭೌತಿಕವಾಗಿ "ಹುತಾತ್ಮರ ದಿನಾಚರಣೆಯಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ ಆದರೂ ಹೋಟೆಲಿನ ಕೋಣೆಯೊಳಗೆ 40 ಗಂಟೆಗೂ ಹೆಚ್ಚು ಕಾಲ ನಾವಿದ್ದದ್ದು ಜಮ್ಮು ಕಾಶ್ಮೀರದ ಪ್ರಜಾ ಪ್ರಭುತ್ವ ಚಳುವಳಿಯೊಡನೆ ದೇಶದ ಉಳಿದ ಭಾಗದ ಪ್ರಜಾಪ್ರಭುತ್ವ ಚಳುವಳಿಯು ಹೊಂದಿದ್ದ ಐಕ್ಯತೆಯನ್ನು ಗಟ್ಟಿಗೊಳಿಸಿತು.

## ಎರಡನೆಯ ವ್ಯತ್ಯಾಸ

1959ರಲ್ಲಿ ನನ್ನ ಮಂತ್ರಿ ಮಂಡಳವನ್ನು ಉರುಳಿಸಿದಾಗ ವಿವಿಧ ಪಕ್ಷಗಳ ನಮ್ಮ ಸ್ನೇಹಿತರು ವೈಯಕ್ತಿಕವಾಗಿ ನನಗೆ ಅನುಕಂಪ ವ್ಯಕ್ತ ಪಡಿಸಿದರು. ವಿರೋಧ ಪಕ್ಷಗಳು ಸಾಮೂಹಿಕ ಸೌಹಾರ್ದತೆ ವ್ಯಕ್ತ ಪಡಿಸಲು ಮುಂದೆ ಬರಲಿಲ್ಲ

1959ರ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ನಾನು ಅಖಿಲ ಭಾರತ ಪ್ರವಾಸ ಕೈಗೊಂಡಾಗ ಜನತೆಯ ದೊಡ್ಡ ವಿಭಾಗ ನನ್ನನ್ನು ಆಪ್ತವಾಗಿ ಸ್ವಾಗತಿಸಿತು. ನಮ್ಮ ವಿರುದ್ಧ ಕೈಗೊಂಡ ಅಧಿಕಾರ ಶಾಹೀ ಕ್ರಮದ ಅಪಾಯವನ್ನು ನಾನವರಿಗೆ ವಿವರಿಸಿದೆ. ಇದನ್ನು ವಿರೋಧಿಸದೆ ಹೋದಲ್ಲಿ ಯಾವುದೇ ಭಾಗದಲ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ನಿರಾಕರಿಸುವ ಜನತೆಗೆ ಇದೇ ಗತಿ ಒದಗುತ್ತದೆಂದು ನಾನು ಹೇಳಿದೆ. ಜಂಟೀ ವಿರೋಧವನ್ನು ಬೆಳೆಸುವಷ್ಟು ಶಕ್ತಿ ಪಡೆಯದಿದ್ದರೂ ಜನತೆ ನನ್ನ ಮನವಿಯನ್ನು ಸಾವಧಾನವಾಗಿ ಆಲಿಸಿತು.

ಈ ದಿನ, ನಾನು ಅಂದು ಜನತೆಯಲ್ಲಿ ಕೋರಿದ್ದ ಜಂಟೀ ವಿರೋಧ ಆಕಾರ ಪಡೆದುಕೊಳ್ಳಲು ಪ್ರಾರಂಭಿಸಿದ. ಅನೇಕ ವಿಷಯಗಳ ಕುರಿತು ಭಿನ್ನಾಭಿಪ್ರಾಯವಿದ್ದರೂ ಕೂಡ ವಿರೋಧ ಪಕ್ಷಗಳು ಕಾಶ್ಮೀರದ ಘಟನೆಯನ್ನು ಪ್ರತಿಭಟಿಸಿದೆ. ಅನೇಕ ತಿಂಗಳುಗಳ ನಂತರ ಘಟನೆಯೊಂದರ ಕುರಿತು ವಿರೋಧ ಪಕ್ಷಗಳು ಏಕಾಭಿಪ್ರಾಯ ವ್ಯಕ್ತ ಪಡಿಸಿವೆ. ಆದರೆ ಇದು ಬಿ.ಜೆ.ಪಿ.ಯಿಂದ ಕಮ್ಯೂನಿಸ್ಟರವರೆಗೆ ಎಲ್ಲಾ ವಿರೋಧ ಪಕ್ಷಗಳನ್ನು ಒಟ್ಟುಗೂಡಿಸುವಂತಹುದಲ್ಲ ಕಾಶ್ಮೀರ ಕುರಿತಂತೆ ವಿರೋಧ ಪಕ್ಷಗಳ ಅಭಿಪ್ರಾಯಕ್ಕೆ ವ್ಯತಿರಿಕ್ತವಾದ ತನ್ನದೇ

(6ನೇ ಪುಟ ನೋಡಿ)

### ಬರೆಯದ ವಾಣಿಗಳು

ಯಾರೋ ಬೇಡುವ ಯಾರೋ ಹಾಡುವ
ಬರೆಯದ ವಾಣಿಗಳು
ಯಾರೋ ಮುಗಿಲಲಿ ಯಾರೋ ಕಣಿವೆಯಲಿ
ಹೊಂದದ ಚಿತ್ರಗಳು

ತಿನ್ನಲಾರದೆ ಅನ್ನವ ಮೋರಿಗೆ
ತೂರುವ ಹಸ್ತಗಳು
ಮಣ್ಣಿನ ಜೊತೆ ಬೆರೆತನ್ನವೇ ಎಷ್ಟೋ
ಒಡಲಿಗೆ ವಸ್ತುಗಳು
ಚಿನ್ನದ ಭಾರಕೆ ತಾರಾಡುವ ಮೈ
ಸರಿಯುವ ಠೀವಿಗಳು
ಹೊದಿಯಲು ಹಚ್ಚಡ ಇಲ್ಲದೆ ಚಳಿಯಲಿ
ನಡುಗುವ ದೇಹಗಳು

ಉಣ್ಣುವ ಬಾಯಿಗೆ ದುಡಿಯುವ ಕೈಗಳು
ಅವರವರದೆ ಇರಲಿ
ಅನುಭವಿಸುವ ಸುಖವೆಲ್ಲಕೆ ತಮ್ಮದೆ
ಬೆವರಿನ ಬೆಲೆ ಇರಲಿ
ಜೀವಜೀವಗಳ ನಡುವೆ ಎದ್ದ
ಗೋಡೆಗಳ ಪಾಯ ಬಿರಿದು
ಉರುಳಿ ನೆಲಕೆ ತಡೆ, ತೊಲಗಲಿ ಅಂತರ
ತರತಮ ನೀತಿಗಳು

ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ
(ದೀಪಿಕಾ ಮತ್ತು ಬಾರೋ ವಸಂತ ಸಂಕಲನದಿಂದ)

ಅರುಣ್ ಶೌರಿ "ಬಯಲು" ಗೊಳಿಸಿದ ಟೊಳ್ಳು ಸಂಗತಿಗಳು | 8

# ರಾಷ್ಟ್ರೀಯ ಸಮಗ್ರತೆ : ಶೌರಿಯಂತವರು ನಾಚಿಕೆಪಟ್ಟುಕೊಳ್ಳಬೇಕಾದ ವಿಫಲತೆ

[ಮೂರನೆಯ ಭಾಗದ ಕೊನೆಯ ಕಂತು]

— ಕಾ|| ಎಂ. ಬಸವಪುನ್ನಯ್ಯ

(ಕಳೆದ ಸಂಚಿಕೆಯಿಂದ)

ಆಗಿನ ಪರಿಸ್ಥಿತಿಹೇಗಿತ್ತೆಂದರೆ ವಿಶಾಲ ಮುಸ್ಲಿಂ ಜನಸ್ತೋಮ ಮುಸ್ಲಿಂ ಲೀಗ್ ನಾಯಕತ್ವದ ಗಾಢ ಪ್ರಭಾವಕ್ಕೊಳಗಾಗಿತ್ತು. ಈ ಅಂಶವನ್ನು ಗಂಭೀರವಾದ ಯಾವುದೇ ರಾಜಕೀಯ ಪಕ್ಷ ಕಡೆಗಾಣಿಸುವುದು ಸಾಧ್ಯವಿರಲಿಲ್ಲ. ಲೀಗ್‌ನ್ನು ಬ್ರಿಟಿಶ್ ಪರವಾದ ಕೋಮುವಾದಿ ಮತ್ತು ಪ್ರತಿಕ್ರಿಯಾವಾದಿ ಪಕ್ಷ ಎಂದು ಸಾರಸಗಟು ಖಂಡಿಸುವುದು ದೇಶವನ್ನು ಎದುರಿಸುತ್ತಿದ್ದ ಸಮಸ್ಯೆಗೆ ಪರಿಹಾರವೇನೂ ಆಗುತ್ತಿರಲಿಲ್ಲ. ಯಾಕೆಂದರೆ ಅಂತಹ ಖಂಡನೆಯ ಮೂಲಕ ವಿಶಾಲ ಮುಸ್ಲಿಂಜನಸ್ತೋಮವ ನಮ್ಮ ಧ್ಯೇಯ ಸಾಧನೆಯ ಹೋರಾಟ ಕ್ಕೆಸಿಗದಂತಾಗುತ್ತಿತ್ತು.

ತಮ್ಮ "ಒಡೆದು ಆಳುವ" ಧೋರಣೆಯ ಅವಿಭಾಜ್ಯ ಅಂಗವಾಗಿ ಹಿಂದೂ ಮತ್ತು ಮುಸ್ಲಿಮರ ನಡುವೆ ಕಂದರ ಉಂಟುಮಾಡಲು ತಮ್ಮದೇ ಆದ ಆಟ ಆಡುತ್ತಿದ್ದರು ಸ್ವರಾಜ್ಯವೆಂದರೆ, ಆಗಿನ ಸಂದರ್ಭದಲ್ಲಿ, ಹಿಂದೂ ಬಹುಸಂಖ್ಯಾತರ ಆಳ್ವಿಕೆಯಾದ್ದರಿಂದ ತಾವು ಅದನ್ನು ಸ್ವೀಕರಿಸುವುದು ಸಾಧ್ಯವೇ ಇಲ್ಲ ಎಂಬ ಮುಸ್ಲಿಂ ಲೀಗ್‌ನ ಶಂಕೆ ಅಥವಾ ತಪ್ಪು ಶಂಕೆಯನ್ನು ದೂರ ಮಾಡಲು ಕಾಂಗ್ರೆಸ್ ವಿಭಿನ್ನ ಪರಿಹಾರಗಳನ್ನು ಬಳಸಲು ಯತ್ನಿಸುತ್ತಿತ್ತು. ಲೀಗ್‌ನ್ನು ಬದಿಗಿಟ್ಟು ಕಾಂಗ್ರೆಸ್‌ನೊಡನೆ ಯಾವ ಒಪ್ಪಂದಕ್ಕೂ ತಾವು ಬರುವುದಿಲ್ಲವೆಂಬ ಬ್ರಿಟಿಶರ ಆಶ್ವಾಸನೆಗೆ ಹೆಚ್ಚೆಚ್ಚು ಮರುಳಾಗುತ್ತಾ ಬಂದ ಜಿನ್ನಾರ ನಾಯಕತ್ವದ ಮುಸ್ಲಿಂ ಲೀಗ್ ಈ ಮೂಲಕ ಭಾರತೀಯ ಕಾಂಗ್ರೆಸ್‌ಗೆ ಅಧಿಕಾರದ ಹಸ್ತಾಂತರವಾಗುವುದಕ್ಕೆ ಒಂದು ರೀತಿಯ ನಿಷೇಧಾಧಿಕಾರವನ್ನು ಚಲಾಯಿಸುವಂತಾಯಿತು.

## ನಿಜವಾದ ಪ್ರೇರಕಾಂಶಗಳು

ಸ್ವಾತಂತ್ರ್ಯ ಹೋರಾಟಕ್ಕೆ ಅಪಾಯ ವೊಡ್ಡಿದ್ದ ಈ ಆಂತರಿಕ ಸ್ಥಿತಿಯ ಒತ್ತಡ, ಸಾಮ್ರಾಜ್ಯಶಾಹಿ ಕಸರತ್ತುಗಳನ್ನು ವಿಫಲಗೊಳಿಸಲು ಬೇಗನೇ ಒಂದು ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಲು ಸಾಧ್ಯವಾಗುವಂತೆ ಕಾಂಗ್ರೆಸ್ ಲೀಗ್ ಐಕ್ಯತೆ ಏರ್ಪಡಿಸಬೇಕಾದ ಅನಿವಾರ್ಯ ಅವಶ್ಯಕತೆ, ಇವೆಲ್ಲದರ ಜೊತೆಗೆ ಫ್ಯಾಸಿಸ್ಟ್-ವಿರೋಧಿ ಯುದ್ಧಕ್ಕೆ ಗರಿಷ್ಟ ನೆರವು ನೀಡಬೇಕಾದ ಅಗತ್ಯ-ಇವು ಮತ್ತು ಕೇವಲ ಇವಿಷ್ಟೇ ಸಿ. ಪಿ. ಐ. ನ ಮತ್ತು ಹಿಂದೂ-ಮುಸ್ಲಿಂ ತೊಡಕಿಗೆ ಅದು ಮಂಡಿಸಿದ ಪರಿಹಾರಗಳ ಹಿಂದೆ ಇದ್ದ ಪ್ರೇರಕಾಂಶಗಳು.

ಹಿಂದೂ — ಮುಸ್ಲಿಂ ಐಕ್ಯತೆಯ ಸಾಧನೆ ಮತ್ತು ದೇಶದ ಕೋಮುವಾರು ವಿಭಜನೆಯನ್ನು ತಡೆಯುವ ಹೋರಾಟದ ಅಂತಿಮ ಪರಿಣಾಮವಾದರೂ ಏನು? ಹೆಚ್ಚೆಚ್ಚಾಗಿ ಹಿಂದೂಗಳ ಆಶೋತ್ತರಗಳೊಂದಿಗೆ ಗುರುತಿಸಲ್ಪಡಲಾರಂಭಿಸಿದ ಕಾಂಗ್ರೆಸ್ಸು ಒಂದೆಡೆ ಮತ್ತು ಮುಸ್ಲಿಂ ಲೀಗ್ ಬ್ರಿಟಿಶರ ಕೋಮುವಾರು ವಿಭಜಿಸಿ ಆಳುವ ಧೋರಣೆಯನ್ನು ಸೋಲಿಸುವಲ್ಲಿ ವಿಫಲಗೊಂಡು ಅಂತಿಮವಾಗಿ ಬ್ರಿಟಿಶ್ ಪಿತೂರಿಗೆ ಬಲಿಯಾದವು ಎಂಬುದನ್ನು ಇತಿಹಾಸ ತೋರಿಸಿಕೊಟ್ಟಿದೆ. ಬ್ರಿಟಿಶರನ್ನು ಎದುರಿಸಲು 'ಹಿಂದೂ-ಮುಸ್ಲಿಂ ಕೋಮು ಸೌಹಾರ್ದ" ವನ್ನು ಸಾಧಿಸುವಲ್ಲಿ ಎರಡೂ ಪಕ್ಷಗಳು ವಿಫಲಗೊಂಡವು. ಭಾರತದ ಕೋಮುವಾರುವಿಭಜನೆಗೆ ಜಿನ್ನಾರ ನಾಯಕತ್ವದ ಲೀಗ್ ಹೆಚ್ಚಿನ ಜವಾಬ್ದಾರಿ ಎಂಬುದನ್ನು ಒಪ್ಪಿಕೊಳ್ಳಬೇಕಾಗಿದೆಯಾದರೂ ಪ್ರಮುಖವಾಗಿ ತಪ್ಪು ಮಾಡಿದವರು ಯಾರು, ಕಾಂಗ್ರೆಸ್ಸೋ ಅಥವಾ ಲೀಗೋ ಎಂಬುದು ಈಗ ಸುಮಾರಾಗಿ ಅಪ್ರಸ್ತುತ.

## ಕೋಮು ಸೌಹಾರ್ದತೆ ಏಕೆ ಬರಲಿಲ್ಲ ?

ಯಾಕೆ ಈ ಎರಡು ಮಹಾನ್ ಸಾಮೂಹಿಕ ಸಂಘಟನೆಗಳು ಐಕ್ಯತೆಯನ್ನು ಸ್ಥಾಪಿಸಿ ವಿದೇಶೀ ಸಾಮ್ರಾಜ್ಯಶಾಹಿ ಆಳರಸರ ವಿರುದ್ಧ ಸಂಯುಕ್ತ ರಂಗ ಕಟ್ಟುವುದರಲ್ಲಿ ವಿಫಲಗೊಂಡವು? ಇದಕ್ಕೆ ಈ ಸಂಘಟನೆಗಳ ಹಿಂದೆ ಒಂದಾದ ಜನಸ್ತೋಮಗಳನ್ನು ದೂಷಿಸುವುದಾಗಲೀ ಕಮ್ಯೂನಿಸ್ಟ್ ಆಂದೋಲನವನ್ನು ಮತ್ತು ಅದು ಜನಾಂಗಗಳ ಸ್ವಯಂ ನಿರ್ಧಾರದ ಸಿದ್ಧಾಂತವನ್ನು ತಪ್ಪಾಗಿ ಅನ್ವಯಿಸಿದ್ದನ್ನು ಬಲಿಪಶುವನ್ನಾಗಿ ಮಾಡುವುದಾಗಲೀ ತಪ್ಪಾಗುತ್ತದೆ; ಇದಕ್ಕೆ ನಿಜವಾದ ಕಾರಣ ಬೇರೆಯದೆ ಎಂಬ ಅಂಶವನ್ನು ಮರೆತಂತಾಗುತ್ತದೆ.

ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಈ ಎರಡೂ ಪಕ್ಷಗಳ ಮುಖಂಡರೂ ಭಾರತೀಯ ಬೂರ್ಜ್ವಾ—ಭೂಮಾಲಕ ಪಕ್ಷಗಳ ರಾಜಕೀಯ ಹಾಗೂ ಸೈದ್ಧಾಂತಿಕ ಪ್ರತಿನಿಧಿಗಳಾಗಿದ್ದರು. ಈ ಎರಡೂ ಪಂಗಡಗಳ ಮುಖಂಡರಿಗೆ ಒಂದೇ ತರವಾದ ಹಲವು ವರ್ಗಹಿತಾಸಕ್ತಿಗಳಿದ್ದವು ಮೊದಲನೆಯದಾಗಿ, ಬ್ರಿಟಿಶ್ ಆಳರಸರೊಂದಿಗೆ ತಮ್ಮ ಜಗಳಗಳಲ್ಲಿ "ತೀರಾ ಮುಂದೆ" ಹೋಗುವುದು ಅವರಿಗೆ ಬೇಕಿರಲಿಲ್ಲ. ಆದ್ದರಿಂದ ತಮ್ಮ ಹೋರಾಟಗಳನ್ನು ಸ್ವರೂಪದಲ್ಲೂ ಮತ್ತು ಸತ್ವದಲ್ಲೂ ಅವರು ಮಂದಗೊಳಿಸಿದರು. ಎರಡನೆಯದಾಗಿ, ಇಬ್ಬರೂ ಅಂತರ್ಯುದ್ಧ ಕಾರ್ಮಿಕವರ್ಗ ಮತ್ತು ರೈತಾಪಿ ಜನತೆಯೊಂದಿಗೆ ವೈಷಮ್ಯ ಹೊಂದಿದ್ದರು. ಯಾಕೆಂದರೆ ಅವರ ಆಂದೋಲನಗಳು ತಮ್ಮ ಈ ವರ್ಗಹಿತಾಸಕ್ತಿಗಳಿಗೆ ಸವಾಲು ಎಂದು ಪರಿಗಣಿಸಿದ್ದರು ಮೂರನೆಯದಾಗಿ, ಬೂರ್ಜ್ವಾ-ಭೂಮಾಲಕ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಿದ್ದುದರಿಂದ ಕಾಂಗ್ರೆಸ್ ಮತ್ತು ಲೀಗ್ ಈ ಎರಡರ ಮುಖಂಡರೂ ಕೋಮು ಭಾವನೆಗಳಿಗೆ ಮತ್ತು ಸಂಸ್ಕೃತಿಗೆ ಬಲಿಯಾಗುವ ಸಂಭವವಿತ್ತು.

ಒಂದು ದೇಶ ಅಥವಾ ಒಂದು ರಾಷ್ಟ್ರೀಯ ಜನಾಂಗ ಎಂದಾಗಲು ಧರ್ಮ ಮತ್ತು ಕೋಮು ಇವು ನಿರ್ಣಾಯಕ ಅಂಶಗಳೇನೂ ಅಲ್ಲ. ಆದರೆ ಆಗಿನ ಪರಿಸ್ಥಿತಿಯಲ್ಲಿ ಪಾಕಿಸ್ತಾನದ ಪ್ರತ್ಯೇಕ ಪ್ರಭುತ್ವ ಬೇಕೆಂಬ ಮುಸ್ಲಿಂ ಲೀಗ್ ನಾಯಕತ್ವದ ಒತ್ತಾಯವನ್ನು ಎದುರಿಸುವುದು ಮತ್ತು ಅದರಿಂದ ತಪ್ಪಿಸಿಕೊಳ್ಳುವುದು ಅಂತಿಮವಾಗಿ ಅಸಾಧ್ಯವೇ ಆಗಿತ್ತು.

## ಸಮಾನ ವರ್ಗ ಹಿತಾಸಕ್ತಿ

ವಿದೇಶೀ ಆಳ್ವಿಕೆಯ ವಿರುದ್ಧ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಜನಸಾಮಾನ್ಯರನ್ನು ಜಾಗೃತಗೊಳಿಸಲು ಕಾಂಗ್ರೆಸ ಮತ್ತು ಲೀಗ್ ಈ ಎರಡೂ ಪಕ್ಷಗಳ ಮುಖಂಡರು ಧಾರ್ಮಿಕ ಪುನರುತ್ಥಾನವಾದವನ್ನು ತಮ್ಮ ಆಧಾರವಾಗಿ ಮಾಡಿಕೊಂಡಾಗ ಕೈ ಮೇಲಾದದ್ದು ಕೋಮುವಾದವೇ. ವಿದೇಶೀ ಬ್ರಿಟಿಶ್ ಆಳ್ವಿಕೆಯ ವಿರುದ್ಧ ಹೋರಾಟದಲ್ಲಿ ಸ್ಫೂರ್ತಿ ತುಂಬಲು ಹಿಂದಿನ ಹಿಂದೂ ಹಾಗೂ ಮುಸ್ಲಿಂ ಸಾಮ್ರಾಜ್ಯಗಳ ವೈಭವವನ್ನು ಅನುಕ್ರಮವಾಗಿ ಹಿಂದೂ ಮತ್ತು ಮುಸ್ಲಿಂ ಜನಸ್ತೋಮಗಳ "ಸುವರ್ಣ ಯುಗ" ಎಂದು ಹಾಡಿ ಹೊಗಳುವುದು ಆರಂಭವಾಯಿತು. ಅಲ್ಪಸಂಖ್ಯಾತ ಮುಸ್ಲಿಂ ಕೋಮಿನ ಮಟ್ಟಿಗೆ ಇದು ಇನ್ನೂ ಹೆಚ್ಚಾಗಿ ಎದ್ದು ಕಾಣುವಂತಿತ್ತು.

ಹಿಂದೂ ಮತ್ತು ಮುಸ್ಲಿಂ ಬಂಡವಾಳಶಾಹಿಗಳು ಮತ್ತು ಭೂಮಾಲಕರ ವಿರುದ್ಧ ಕಾರ್ಮಿಕರು ಮತ್ತು ರೈತರ ಸಂಯುಕ್ತ ವರ್ಗ ಮತ್ತು ಸಾಮೂಹಿಕ ಕಾರ್ಯಾಚರಣೆಗಿಳಿಯುವುದನ್ನು ಕಾಂಗ್ರೆಸ್ ಮತ್ತು ಲೀಗ್ ಎರಡೂ ಮುಖಂಡತ್ವಗಳೂ ತೀವ್ರವಾಗಿ ವಿರೋಧಿಸುತ್ತಿದ್ದವು. ಕೃಷಿ ಸಂಬಂಧಿ ಮತ್ತು ಬಂಡವಾಳಶಾಹೀ-ವಿರುದ್ಧ ಹೋರಾಟಗಳಲ್ಲಿ ಬೆಸೆದು ಬರಬಹುದಾಗಿದ್ದ ಸಾಮಾನ್ಯ ಅನುಬಂಧಗಳು ಮಾತ್ರ ಹಿಂದೂ-ಮುಸ್ಲಿಂ ಐಕ್ಯತೆಯನ್ನು ಬೆಸೆಯುವ ಮತ್ತು ಬ್ರಿಟಿಶ್ ಆಳ್ವಿಕೆಯ ವಿರುದ್ಧ ಅದನ್ನು ಕಾಪಾಡಿಕೊಳ್ಳುವ ಏಕ ಮಾತ್ರ ಮತ್ತು ಖಾತ್ರಿಯಾದ ಭರವಸೆಯಾಗಿತ್ತು. ಆದರೆ ಇಂತಹ ಸರ್ವ ಸಾಮಾನ್ಯ ರೈತ ಹೋರಾಟಗಳ ಅಭಾವ, ಅದಕ್ಕೂ ಹೆಚ್ಚು ಮುಖ್ಯವೆಂದರೆ, ಹಿಂದೂ ಮತ್ತು ಮುಸ್ಲಿಂ ಭೂಮಾಲಕರ ವಿರುದ್ಧ ಹಿಂದೂ ಮತ್ತು ಮುಸ್ಲಿಂ ರೈತಾಪಿ ವರ್ಗದ ಸಂಯುಕ್ತ ಸಾಮೂಹಿಕ ಕಾರ್ಯಾಚರಣೆಗೆ ಕಾಂಗ್ರೆಸ್ ಮತ್ತು ಲೀಗ್ ಎರಡೂ ಪಕ್ಷಗಳ ನಾಯಕರ ಬಹಿರಂಗ ವಿರೋಧ ದೇಶದ ವಿಶಾಲ ರೈತ ಜನಸ್ತೋಮದ ಒಳಗೆ ಕೋಮು ಆಧಾರದ ಮೇಲೆ ಕಂದಕವನ್ನು ಉಂಟು ಮಾಡಿತು; ತನ್ಮೂಲಕ ಅವರಲ್ಲಿ ವರ್ಗ ಐಕ್ಯತೆ, ಸೌಹಾರ್ದತೆ ಮತ್ತು ಸರ್ವ ಸಾಮಾನ್ಯ ಪ್ರಜ್ಞೆ ಮೂಡದಂತೆ ತಡೆ ಹಿಡಿಯಿತು.

ಈ ರೀತಿ ಸಾಮಾನ್ಯ ವರ್ಗ ಶೋಷಕರು ಮತ್ತು ದಮನಕಾರರ ವಿರುದ್ಧ ಹೋರಾಟದಲ್ಲಿ ಬೆಳೆದು ಬರಬಹುದಾಗಿದ್ದ ಕೋಮು ಐಕ್ಯತೆ ಗಟ್ಟಿಗೊಳ್ಳದಂತೆ ತಡೆಯಲು ಈ ಎರಡೂ ಮುಖಂಡತ್ವಗಳ ವೈಷಮ್ಯಪೂರ್ಣ ನಿಲುವೇ ಕಾರಣ. ಭಾರತೀಯ ಜನತೆಯಲ್ಲಿ 90 ಶೇಕಡಾದಷ್ಟಿರುವ ಕಾರ್ಮಿಕರ ಮತ್ತು ರೈತರ ಇಂತಹ ಒಂದು ಸಾಮೂಹಿಕ ಐಕ್ಯತೆಯ ಕೇವಲ ಸಾಧ್ಯತೆಯೇ! ಕಾಂಗ್ರೆಸ್ ಮತ್ತು ಲೀಗ್ ಮುಖಂಡರಿಗೆ ಒಂದು ಬೆದರಿಕೆಯಾಗಿತ್ತು. ಈ ರೀತಿ ಹಿಂದೂ-ಮುಸ್ಲಿಂ ಐಕ್ಯತೆಯ ಪ್ರಶ್ನೆ ಇನ್ನೂ ಆಳವಾದ ಕೋಮು ವ್ಯತ್ಯಾಸವನ್ನು ನಾಗಿಬಿಡುವ ವರ್ಗ ಐಕ್ಯತೆಯಾಗಿ ಬೆಳೆಯಲಿಲ್ಲ. ಬದಲಿಗೆ ಅದು "ಸಂಧಿಗಳು," "ಒಪ್ಪಂದಗಳು" "ಕಸರತ್ತುಗಳು ಮತ್ತು ಪ್ರತಿಕಸರತ್ತು" ಮಟ್ಟಕ್ಕೆ ಇಳಿದು ಬಿಟ್ಟಿತು. ಇವೆಲ್ಲದರ ಮೂಲಕ ವಿದೇಶೀ ಬ್ರಿಟಿಶ್ ಆಳರಸರ ಬಲೆಗೆ ಬಿದ್ದು ಬಿಟ್ಟಿತು.

## ಸಂಪ್ರದಾಯಶರಣ ನಿಲುವು

ಗಾಂಧಿಯ ನಿಲುವನ್ನು ತೋರಿಸುವ ಒಂದು ಉದಾಹರಣೆಯನ್ನು ಗಮನಿಸೋಣ. ಇದು ಕಾಂಗ್ರೆಸ್ ನಾಯಕತ್ವದಲ್ಲಿ ಪ್ರಾಬಲ್ಯ ಪಡೆದಿದ್ದ ಯೋಚನಾ ವೈಖರಿಯ ಪ್ರತೀಕವಾಗಿದೆ.

ಶ್ರೀ. ಜಯಪ್ರಕಾಶ್ ಮತ್ತು ಶ್ರೀ ಸಂಪೂರ್ಣಾನಂದರಿಗೆ ಗಾಂಧಿ 1940ರ ಜನವರಿ 20 'ಹರಿಜನ" ದಲ್ಲಿ ಬರೆದ ತನ್ನ ಉತ್ತರದಲ್ಲಿ ಹೀಗೆ ಹೇಳಿದ್ದಾರೆ- 'ತುಂಬಾ ಪ್ರಭಾವ ಪಡೆದಿರುವ ಒಬ್ಬ ಕಾಂಗ್ರೆಸ್ಸಿಗರು ಈ ಸಲ ನಾಗರಿಕ ಪ್ರತಿಭಟನೆಯನ್ನು ನಾನು ಘೋಷಿಸಿದ ಕೂಡಲೇ ದಂಗಾಗುವಷ್ಟು ಬೆಂಬಲ ಸಿಗುತ್ತದೆ ಎಂದು ನನಗೆ ಹೇಳಿದ್ದಾರೆ.

ಸಮಸ್ತ ಕಾರ್ಮಿಕ ಜಗತ್ತು ಮತ್ತು ಭಾರತದ ಹಲವು ಭಾಗಗಳ ಕಿಸಾನರು ಅದೇ ಕಾಲಕ್ಕೆ ಒಂದು ಮುಷ್ಕರ ಘೋಷಿಸುತ್ತಾರೆ ಎಂದು ಆತ ನನಗೆ ಭರವಸೆ ನೀಡುತ್ತಾರೆ. ನಾನು ಏಕ್‌ದಂ ಗಲಿಬಿಲಿಗೊಳ್ಳಬೇಕು. ಮತ್ತು ನನ್ನ ಎಲ್ಲಾ ಯೋಜನೆಗಳು ತಲೆ ಕೆಳಗಾಗುತ್ತವೆ. ನನ್ನ ಸಮ್ಮುಖ ಸಹಾರಾತ್ಮಕ ಯೋಜನೆಯೇನೂ ಇಲ್ಲ ಎಂದು ನಾನು ತಪ್ಪೊಪ್ಪಿಕೊಳ್ಳಬೇಕಾಗಿದೆ... ನಾನು ಗೊತ್ತಿದ್ದೂ ಅರಾಜಕತೆಯಲ್ಲಿ ಮತ್ತು ಕೆಂಪು ವಿನಾಶದಲ್ಲಿ ಕೊನೆಗೊಳ್ಳುವ ಒಂದು ಹೋರಾಟಕ್ಕೆ ಇಳಿಯಬೇಕೆಂದು ಯಾರೂ ನಿರೀಕ್ಷಿಸುವುದಿಲ್ಲ ಎಂದು ಆಶಿಸುತ್ತೇನೆ." (ಗಾಂಧಿಯ ಸಂಕಲಿತ ಕೃತಿಗಳು, ಸಂಪುಟ ನಂ. 71, ಪುಟ 116-117)

ಅಗಾಧ ಪ್ರಮಾಣದಲ್ಲಿ ಒಂದು ಸಮರ ಶೀಲ ಸಾಮ್ರಾಜ್ಯ ಶಾಹಿ—ವಿರೋಧೀ ಕಾರ್ಯಾಚರಣೆಯ ಸಾಧ್ಯತೆಗಳು ಉಂಟಾದಾಗಲೆಲ್ಲಾ ಕಾಂಗ್ರೆಸ್ ಮುಖಂಡರು ವಿರೋಧ ವ್ಯಕ್ತ ಪಡಿಸಿದ ಬಗೆಯಿದು. ಸಾಮ್ರಾಜ್ಯ ಶಾಹೀ—ವಿರೋಧಿ, ರಾಷ್ಟ್ರೀಯ ವಾದೀ ಪ್ರಜ್ಞೆಯ ಬದಲು ಕೋಮುವಾದೀ ಪ್ರತ್ಯೇಕತಾ ಭಾವನೆ ಬೆಳೆಯಲು ಅವಕಾಶ ಕೊಡಲು ಉತ್ತೇಜನ ನೀಡಲು ಮತ್ತು ಅದು ಮುಂದುವರಿಯುತ್ತಾ ಹೋಗಲು ರೈತರ ಮತ್ತು ಕಾರ್ಮಿಕರ ಸಂಯುಕ್ತ ಹೋರಾಟ ಕುರಿತಂತೆ ಇಂತಹ ಸಂಪ್ರದಾಯಶರಣ ಮತ್ತು ಸುಧಾರಣಾವಾದಿ ನಿಲುವೇ ಕಾರಣ. ಸ್ಪಷ್ಟ ಮಾತುಗಳಲ್ಲಿ ಜಾತ್ಯತೀತತೆಯ ಪ್ರಚಾರ ಮಾಡುವ ಕಾಂಗ್ರೆಸ್ ಹೈಕಮಾಂಡ್‌ನ ವ್ಯಕ್ತ ಭಾವವೇ ಈ ರೀತಿ ಇರಬೇಕಾದರೆ ವಿವಿಧ ಹಂತಗಳಲ್ಲಿ ಮುಲ್ಲಾಗಳು, ಮೌಲ್ವಿಗಳು ಮತ್ತು "ಅಸಲೀ ಮುಸಲ್ಮಾನ"ರಿಂದ ನಡೆಸಲ್ಪಡುತ್ತಿದ್ದ ಮುಸ್ಲಿಂ ಲೀಗ್‌ನ ನಿಲುವೇನಿರಬಹುದು ಎಂದು ಯಾರಾದರೂ ಊಹಿಸಿಕೊಳ್ಳಬಹುದು.

ಹಿಂದೂ-ಮುಸ್ಲಿಂ ಐಕ್ಯತೆಯ ಸಮಸ್ಯೆ ಇಂದಿಗೂ ಮೂಲವೇ ಕಂಡು ಬರದ ಪ್ರಶ್ನೆಯಾಗಿ ಉಳಿದಿದೆಯೆಂಬ ವಾಸ್ತವ ಸಂಗತಿ ಈ ಮೇಲಿನ ವಿಶ್ಲೇಷಣೆಯ ಸತ್ಯತೆಗೆ ಸಾಕ್ಷಿ ಈಗ ಈ ವಿಭಜಿತ ಉಪ ಖಂಡದ ಆಳುವ ವರ್ಗಗಳು ಮತ್ತು ಪ್ರಭುತ್ವಗಳ ಆಳುವ ಪಕ್ಷಗಳು ಏರುತ್ತಿರುವ ಸಾಮೂಹಿಕ ಅಸಂತೃಪ್ತಿಯನ್ನೆದುರಿಸಿ ತಮ್ಮ ಅಳ್ವಿಕೆಯನ್ನು ಉಳಿಸಿಕೊಳ್ಳಲು ಇದನ್ನು ಬಹಿರಂಗವಾಗಿಯೇ ಬಳಸಿಕೊಳ್ಳುತ್ತಿವೆ.

## ಶೌರಿಗೆ ಬಲಿಪಶುಗಳು ಬೇಕೇ ?

1942–45 ರಲ್ಲಿ ಸಿ. ಪಿ. ಐ ಕಾಂಗ್ರೆಸ್-ಲೀಗ್‌ನ ಐಕ್ಯತೆಯ ಬಗ್ಗೆ ಶ್ರದ್ಧೆಯಿಂದ ಪ್ರಚಾರ ನಡೆಸಿದ್ದಕ್ಕಾಗಿ ಶೌರಿ ಕೋಪೋದ್ರಿಕ್ತರಾಗಿ ಕೆಂಡ ಕಾರಿದರೆ ಅದು ನಿಜವಾದ ಅಪರಾಧಿಗಳನ್ನು, ಕಾಂಗ್ರೆಸ್ ಮತ್ತು ಲೀಗ್‌ನ ಬೂರ್ಜ್ವಾ-ಭೂಮಾಲಕ ಮುಖಂಡತ್ವಗಳನ್ನು ದೋಷ ಮುಕ್ತಗೊಳಿಸುವುದಿಲ್ಲ.

ಕೋಮು ವಿಭಜನೆ ಸಮಸ್ತ ಭಾರತ ಉಪಖಂಡದಲ್ಲಾಗಲೀ ಅಥವಾ ಭಾರತ ಸಂಘ, ಬಾಂಗ್ಲಾ ದೇಶ ಮತ್ತು ಪಾಕಿಸ್ತಾನಗಳಲ್ಲಿ ಪ್ರತ್ಯೇಕವಾಗಿಯಾಗಲೀ ಹಿಂದೂ-ಮುಸ್ಲಿಂ ಐಕ್ಯತೆಯ ಮೂಲ ಭೂತ ಸಮಸ್ಯೆಯನ್ನು ಪರಿಹರಿಸಿಲ್ಲ. ಭಾರತದಲ್ಲಿ ಹಿಂದೂ-ಮುಸ್ಲಿಂ ಸಮಸ್ಯೆ ಮತ್ತೊಮ್ಮೆ ಭಯಾನಕ ಸ್ವರೂಪ ಪಡೆಯುತ್ತಿದೆ. ಕೋಮು ದಂಗೆಗಳು ಹೆಚ್ಚುತ್ತಿವೆ. ಕಟ್ಟಾ ಕೋಮುವಾದೀ ರಾಜಕೀಯ ಪಕ್ಷಗಳು ಮತ್ತು, ಸಾಮಾಜಿಕ-ಧಾರ್ಮಿಕ ಸಂಘಟನೆಗಳು ಬೆಳೆಯುತ್ತಿವೆ ಹಿಂದೂ ಕೋಮುವಾದಿಗಳು ಈಗ ಮುಸ್ಲಿಂ ಮತ್ತು ಇತರ 'ಮೂಲಭೂತವಾದಿ"ಗಳೊಂದಿಗೆ ಸ್ಪರ್ಧಿಸುತ್ತಿರುವುದನ್ನು ಕಾಣಬಹುದು. ಈ ಪರಿಸ್ಥಿತಿಗೆ ಕಮ್ಯುನಿಸ್ಟರು ಕಾರಣ ಎಂದು ಶೌರಿ ದೂಷಿಸಬಯಸುತ್ತಾರೆಯೇ ?

ಜನಾಂಗ ರಾಷ್ಟ್ರೀಯ ಪ್ರಶ್ನೆಯನ್ನು ಅನ್ವಯಿಸುವಲ್ಲಿ ಮಾಡಿದ ತಪ್ಪುಗಳಿಂದ ಪಾಠ ಕಲಿತ ಕಮ್ಯುನಿಸ್ಟರು ಭಾರತ ಒಂದು ಬಹು-ಭಾಷಾ, ಬಹು-ಜನಾಂಗೀಯ ಹಾಗೂ ಬಹು—ರಾಷ್ಟ್ರೀಯತಾ ದೇಶ ಎಂಬ ಸಿದ್ಧಾಂತವನ್ನು ಎತ್ತಿ ಹಿಡಿದಿದ್ದಾರೆ. ಆದ್ದರಿಂದಲೇ ಭಾಷಾ ಆಧಾರದ ಮೇಲೆ ರಾಜ್ಯಗಳ ಪುನರ್ಸಂಘಟನೆಗಾಗಿ ಅವರು ಹೋರಾಡಿದರು.

ತಮ್ಮ ತಪ್ಪುಗಳ ಪ್ರಾಮಾಣಿಕ ವಿಶ್ಲೇಷಣೆಯಿಂದಾಗಿ ಕಮ್ಯುನಿಸ್ಟರಿಗೆ ರಾಷ್ಟ್ರೀಯತೆಯ ಪ್ರಶ್ನೆಯ ಕುರಿತಂತೆ ಮಾರ್ಕ್ಸ್‌ವಾದ—ಲೆನಿನ್‌ವಾದ ಸಿದ್ಧಾಂತಕ್ಕೆ ಅನುಗುಣವಾಗಿ ತಮ್ಮ ಕಾರ್ಯತಂತ್ರಗಳನ್ನು ವಿಕಾಸಗೊಳಿಸಲು ಸಾಧ್ಯವಾಗಿದ್ದರೆ, ಅತ್ತ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ನಿಲುವು ಭಾರತದಲ್ಲಿ ರಾಷ್ಟ್ರೀಯತೆಯ ಪ್ರಶ್ನೆಗೆ ಸಂಬಂಧ ಪಟ್ಟಂತೆ ಸಂಪೂರ್ಣ ತಿರುಗು-ಮುರುಗಾಗಿದೆ. ಶೌರಿಯ ಸಂಶೋಧನೆಗಳು ಇಂತಹ ಸತ್ಯಗಳಿಗೆ ಸಂಬಂಧ ಪಟ್ಟಿಲ್ಲವಾದ್ದರಿಂದ ವಾಸ್ತವ ಚಾರಿತ್ರಿಕ ಸಂಗತಿಗಳನ್ನು ಹೇಳೋಣ

## ಭಾಷಾವಾರು ಮರು ವಿಂಗಡಣೆ

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಡಿಸೆಂಬರ್ 1920ರ ತನ್ನ ನಾಗಪುರ ಅಧಿವೇಶನದಲ್ಲಿ ಪಕ್ಷದ ಆಡಳಿತದ ಉದ್ದೇಶದಿಂದ ಪ್ರಮುಖವಾಗಿ ಭಾಷೆಯನ್ನೇ ಆಧರಿಸಿದ 21 ಪ್ರಾಂತ್ಯಗಳಿಗೆ ಅವಕಾಶ ನೀಡುವ ಹೊಸ ಸಂವಿಧಾನವನ್ನು ಅಂಗೀಕರಿಸಲಾಗಿತ್ತು. 1921 ರಿಂದ ಕಾಂಗ್ರೆಸ್ ಬ್ರಿಟಿಶ್ ಆಡಳಿತಾತ್ಮಕ ಪ್ರಾಂತ್ಯಗಳನ್ನು ಸುಮಾರಾಗಿ ತ್ಯಜಿಸಿ ಬಿಟ್ಟು ತನ್ನ ಕೆಲಸಕ್ಕಾಗಿ ಭಾಷಾ ಘಟಕಗಳ ಮೇಲೇನೇ ಹೆಚ್ಚೆಚ್ಚಾಗಿ ಅವಲಂಬಿಸಲಾರಂಭಿಸಿತು. 1927ರ ಮದ್ರಾಸ್ ಅಧಿವೇಶನದಲ್ಲಿ "ಪ್ರಾಂತ್ಯಗಳನ್ನು ಭಾಷಾ ಆಧಾರದ ಮೇಲೆ ಪುನರ್ವಿಂಗಡಿಸಬೇಕಾದ ಸಮಯ ಈಗ ಬಂದಿದೆ. ಕಾಂಗ್ರೆಸ್ಸಿನ ಸಂವಿಧಾನದಲ್ಲಿ ಅಂಗೀಕರಿಸಿದ ತತ್ತ್ವ ಇದು" ಎಂದು ನಿರ್ಧರಿಸಿತು

1927 ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಒಂದು ಸರ್ವಪಕ್ಷ ಸಮಿತಿಯನ್ನು ರಚಿಸಿತು. ಪಂಡಿತ ಮೋತೀಲಾಲ್‌ನೆಹರೂ ಅದರ ಅಧ್ಯಕ್ಷರಾಗಿದ್ದರು, ಜವಾಹರಲಾಲ್ ನೆಹರೂ ಪ್ರಧಾನ ಕಾರ್ಯದರ್ಶಿಯಾಗಿದ್ದರು. 1928 ರಲ್ಲಿ ಅದು ತನ್ನ ವರದಿ ಸಲ್ಲಿಸಿತು. ಅದರ ಕೆಲವು ಅಂಶಗಳಿವು —

"ಈ ಮರುವಿಂಗಡಣೆ ಯಾವ ತತ್ತ್ವಗಳ ಪ್ರಕಾರ ನಡೆಯಬೇಕು? ಭಾಗಶಃ ಭೌಗೋಳಿಕ ಮತ್ತು ಭಾಗಶಃ ಆರ್ಥಿಕ ಮತ್ತು ಹಣಕಾಸಿಗೆ ಸಂಬಂಧಪಟ್ಟಂತೆ. ಆದರೆ ಪ್ರಮುಖವಾಗಿ ಪರಿಗಣಿಸಲೇ ಬೇಕಾದ ಅಂಶವೆಂದರೆ ಜನತೆಯ ಆಶಯ ಮತ್ತು ಸಂಬಂಧಪಟ್ಟ ಕ್ಷೇತ್ರದ ಭಾಷಾ ಐಕ್ಯತೆ. ಶಿಕ್ಷಣ, ಅದೇ ರೀತಿ ಸಾರ್ವತ್ರಿಕ ಸಂಸ್ಕೃತಿ ಹಾಗೂ ಜೀವನದ ಹೆಚ್ಚಿನ ವಿಭಾಗಗಳಲ್ಲಿ ತ್ವರಿತಗತಿಯ ಪ್ರಗತಿ ಭಾಷೆಯನ್ನು ಅವಲಂಬಿಸಿದೆ ಎನ್ನುವುದು ಎಲ್ಲರಿಗೂ ಮನವರಿಕೆಯಾಗಿರುವ ಸಂಗತಿ. ವಿದೇಶೀ ಭಾಷೆಯೊಂದು ಶಿಕ್ಷಣ ಮಾಧ್ಯಮವಾಗಿದ್ದರೆ ದೇಶದ ವ್ಯಾಪಾರ-ವಹಿವಾಟು ಮತ್ತು ಜನಜೀವನ ಅನಿವಾರ್ಯವಾಗಿಯೇ ಕುಂಠಿತಗೊಳ್ಳುತ್ತದೆ ಎಲ್ಲಿ ಈ ಉದ್ದೇಶಕ್ಕಾಗಿ ವಿದೇಶೀ ಭಾಷೆಯೊಂದು ಬಳಕೆಯಾಗುತ್ತದೋ ಅಲ್ಲಿ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. ಒಂದು ಪ್ರಜಾಪ್ರಭುತ್ವ ದೇಶದಲ್ಲಿ ಪರಿಣಾಮ

> ರಾಷ್ಟ್ರೀಯತೆಯ ಪ್ರಶ್ನೆಯ ಬಗ್ಗೆ ಮಾರ್ಕ್ಸ್‌ವಾದೀ ಪರಿಕಲ್ಪನೆಯನ್ನು ಪರಿಹಾಸ್ಯ ಮಾಡುವ ಶೌರಿಯಂತವರು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನ ಈ ಎರಡರ ಬೂರ್ಜ್ವಾ-ಭೂಮಾಲಕ ಮುಖಂಡರು ಹಿಂದೂ-ಮುಸ್ಲಿಂ ಐಕ್ಯತೆಯನ್ನು ಬುಡಮೇಲು ಮಾಡುವ ಸಾಮ್ರಾಜ್ಯಶಾಹಿ ಚಿತಾವಣೆಗಳಿಗೆ ದುರು ಪೆಚ್ಚು ಮೋರೆ ಹಾಕಿಕೊಳ್ಳಬೇಕಾಗಿ ಬಂದು ಭಾರತದ ಅತ್ಯಂತ ಕ್ರೂರ ಕೋಮು ವಿಭಜನೆಗೆ ಬಲಿಬಿದ್ದರು ಎಂಬುದರ ಬಗ್ಗೆ ನಾಚಿಕೆಪಟ್ಟುಕೊಳ್ಳುವುದು ಒಳ್ಳೆಯದು.

ಕಾರಿಯಾಗಿ ಪಾತ್ರವಹಿಸುವಂತಾಗಬೇಕಾದರೆ ಸಂಗತಿಗಳ ಚೆನ್ನಾದ ಅರಿವು ಹಾಗೂ ಸಾರ್ವಜನಿಕ ವ್ಯವಹಾರಗಳನ್ನು ಅರ್ಥ ಮಾಡಿಕೊಳ್ಳುವ ಮತ್ತು ನಡೆಸುವ ಸಾಮರ್ಥ್ಯ ಇರಬೇಕು. ಒಂದು ವಿದೇಶೀ ಭಾಷೆಯನ್ನು ಬಳಸುತ್ತಿದ್ದರೆ ಪ್ರಜಾಪ್ರಭುತ್ವವೊಂದು ಹೀಗೆ ಮಾಡಲು ಸಾಧ್ಯ ಎಂದು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಜನಸಾಮಾನ್ಯರಿಗೆ ಅರ್ಥವಾಗುವ ಒಂದು ಭಾಷೆಯಲ್ಲಿ ವ್ಯವಹಾರ ಮತ್ತು ರಾಜಕೀಯ ನಡೆಸುವುದು ಅತ್ಯಗತ್ಯವಾಗುತ್ತದೆ. ಪ್ರಾಂತ್ಯಗಳ ಮಟ್ಟಿಗೆ ಇದು ಪ್ರಾಂತೀಯ ಭಾಷೆಯೇ ಆಗಿರಬೇಕು."

ಮುಂದುವರಿದು ಸಮಿತಿ "ಒಂದು ಪ್ರಾಂತ್ಯ ಶಿಕ್ಷಣ ಹೊಂದಬೇಕಾದರೆ ಮತ್ತು ತನ್ನ ದೈನಂದಿನ ಕೆಲಸಗಳನ್ನು ತನ್ನ ಭಾಷೆಯ ಮೂಲಕ ಮಾಡಬೇಕಾದರೆ ಅದು ಒಂದು ಭಾಷಾಕ್ಷೇತ್ರ ಆಗಿರಲೇ ಬೇಕಾಗುತ್ತದೆ. ಅದೊಂದು ಬಹು ಭಾಷಾ ಪ್ರದೇಶವಾದರೆ ತೊಂದರೆಗಳು ಸತತವಾಗಿ ಬರುತ್ತಲೇ ಇರುತ್ತವೆ. ಎರಡು ಅಥವಾ ಇನ್ನೂ ಹೆಚ್ಚು ಭಾಷೆಗಳು ಶಿಕ್ಷಣದ ಮತ್ತು ದೈನಂದಿನ ಕೆಲಸಗಳ ಮಾಧ್ಯಮವಾಗಬೇಕಾಗುತ್ತದೆ. ಆದ್ದರಿಂದ ಪ್ರಾಂತ್ಯಗಳನ್ನು ಭಾಷಾ ಆಧಾರದ ಮೇಲೆ ಮರುವಿಂಗಡಿಸುವುದು ಅಪೇಕ್ಷಣೀಯ ಭಾಷೆಗೆ ಅನುಗುಣವಾಗಿ ಒಂದು ವಿಶಿಷ್ಟ ಬಗೆಯ ಸಂಸ್ಕೃತಿ, ಪರಂಪರೆ ಹಾಗೂ ಸಾಹಿತ್ಯ ಸಾಮಾನ್ಯವಾಗಿ ಇರುತ್ತದೆ. ಒಂದು ಭಾಷಾ ಪ್ರದೇಶದಲ್ಲಿ ಇವೆಲ್ಲಾ ಅಂಶಗಳು ಪ್ರಾಂತ್ಯದ ಸಾರ್ವತ್ರಿಕ ಪ್ರಗತಿಗೆ ನೆರವಾಗುತ್ತವೆ..." ಎಂಬುದರತ್ತ ಗಮನ ಸೆಳೆಯಿತು

1945-46 ರ ಚುನಾವಣಾ ಘೋಷಣೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತೊಮ್ಮೆ ಭಾಷಾ ಆಧಾರದ ಮೇಲೆ ರಾಜ್ಯಗಳ ಮರು ಸಂಘಟನೆಯ ತತ್ತ್ವದ ಪ್ರತಿಜ್ಞೆ ಮಾಡಿತು.

## ತಿರುಗು-ಮುರುಗಾದ ನಿಲುವು

1946 ರ ಡಿಸೆಂಬರಿನಲ್ಲಿ ದಿಲ್ಲಿಯಲ್ಲಿ ನಡೆದ ಭಾರತದ ಭಾಷಾ ಮತ್ತು ಸಾಂಸ್ಕೃತಿಕ ಪ್ರಾಂತ್ಯಗಳ ಸಮಾವೇಶದ ತನ್ನ ಅಧ್ಯಕ್ಷ ಭಾಷಣದಲ್ಲಿ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡ ಡಾ. ಪಟ್ಟಾಭಿ ಸೀತಾರಾಮಯ್ಯ- "ಸ್ವಯಮಾಡಳಿತೆ ಪೂರ್ಣ ಹಾಗೂ ನಿರ್ಬಂಧ ರಹಿತವಾಗಲು ಆಡಳಿತವನ್ನೂ ದೇಶದ ರಾಷ್ಟ್ರೀಯ ನಾಯಕರ ವಿಶ್ವಾಸ ಪಡೆದ ಆರಿಸಿದ ಮಂತ್ರಿಗಳು ನಡೆಸುವಂತಾಗಬೇಕು ಇವರಿಗೆ ಯೋಚನೆ ಮಾಡುವುದು ಮತ್ತು ಮಾತನಾಡುವುದು ಕೇವಲ ತಮ್ಮ ಮಾತೃಭಾಷೆಯಲ್ಲಿ ಮಾತ್ರ ಸಾಧ್ಯ. ಪ್ರಾಂತ್ಯಗಳ ರಚನೆ ಹೇಗಿರಬೇಕೆಂದರೆ ಭಾಷೆ ಮತ್ತು ಸಂಸ್ಕೃತಿಯ ಸಮರೂಪತೆ ಇರುವಂತಾಗಬೇಕು. ಜತೆಗೆ ಆರ್ಥಿಕ ಹಾಗೂ ಹಣಕಾಸಿನ ಸ್ವಸಮರ್ಥ್ಯವೂ ಇರಬೇಕೆಂಬುದೇನೋ ನಿಜ. ಈ ಮೂಲಕ ಶಾಲೆಗಳಲ್ಲಿ ಶಿಕ್ಷಣ, ಕಛೇರಿಗಳಲ್ಲಿ ಆಡಳಿತ, ನ್ಯಾಯಾಲಯಗಳಲ್ಲಿ ವಾದ-ಪ್ರತಿವಾದ ಮತ್ತು ಪರಿಷತ್ತುಗಳಲ್ಲಿ ಪ್ರಾತಿನಿಧ್ಯ ಎಲ್ಲವೂ ಒಂದು ಮತ್ತು ಆ ಪ್ರಾದೇಶಿಕ ಭಾಷೆಯಲ್ಲಿ ನಡೆಯಲು ಸಾಧ್ಯವಾಗುತ್ತದೆ. ಇದಕ್ಕಿಂತ ಕಮ್ಮಿಯಾದುದೇನಿದ್ದರೂ ಪ್ರಾಂತೀಯ ಸ್ವಯಮಾಧಿಕಾರದ ಅಪಹಾಸ್ಯವಾಗುತ್ತದೆ ಮತ್ತು ಒಕ್ಕೂಟ ಭಾವದ ನಿರಾಕರಣೆಯಾಗುತ್ತದೆ" ಎಂದು ಹೇಳಿದರು.

ಆದರೆ ಆಗಸ್ಟ್ 1947 ರಲ್ಲಿ ರಾಜಕೀಯ ಸ್ವಾಧೀನತೆಯನ್ನು ಸಾಧಿಸಿ, ಕಾಂಗ್ರೆಸ್ ನಾಯಕರು ಹೊಸ ಭಾರತೀಯ ಕೇಂದ್ರ ಸರಕಾರವಾಗಿ ಅಧಿಕಾರ ವಹಿಸಿಕೊಂಡಾಗ ಈ ಪ್ರಶ್ನೆಯ ಮೇಲಿನ ನಿಲುವು ಸಂಪೂರ್ಣವಾಗಿ ತಿರುಗು ಮುರುಗಾಯಿತು. ಕೇಂದ್ರದಲ್ಲಿನ ಕಾಂಗ್ರೆಸ್ ಸರಕಾರ ಮತ್ತು ಅದರ ಮುಖಂಡತ್ವ ಭಾಷಾ ಆಧಾರದ ಮೇಲೆ ರಾಜ್ಯಗಳ ಪುನರ್ಸಂಘಟನೆಯ ಕುರಿತ ತನ್ನ ಪ್ರತಿಜ್ಞೆಗಳನ್ನೆಲ್ಲಾ ಮರೆತು ದ್ರೋಹ ಬಗೆಯಲು ನಿರ್ಧರಿಸಿತು. ಜವಾಹರಲಾಲ್ ನೆಹರೂ, ವಲ್ಲಭಭಾಯಿ ಪಟೇಲ್ ಮತ್ತು ಪಟ್ಟಾಭಿ ಸೀತಾರಾಮಯ್ಯನವರ ಒಂದು ಉಚ್ಚಸ್ತರದ ಸಮಿತಿ (ಜೆ ವಿ ಪಿ. ಸಮಿತಿ) ಯನ್ನೂ ನೇಮಿಸಿತು. ಆ ಸಮಿತಿಯ ನೇಮಕದ ಉದ್ದೇಶ ಬಹಳ ಸ್ಪಷ್ಟವಾಗಿತ್ತು; ಕಾಂಗ್ರೆಸ್ ಮುಖಂಡರು ತಮ್ಮ ಹಿಂದಿನ ಮೊಘಲ್ ಮತ್ತು ಬ್ರಿಟಿಶ್ ಆಳಸರರಂತೆ ಹಳೆಯ ಆಡಳಿತಾತ್ಮಕ ಪ್ರಾಂತ್ಯಗಳನ್ನು ಶಾಶ್ವತಗೊಳಿಸಬಯಸಿದರು. ತನ್ಮೂಲಕ ಅವರು ಭಾಷಾವಾರು ಪ್ರಾಂತ್ಯಗಳ ನಿಜವಾದ ಒಕ್ಕೂಟದ ಮತ್ತು ಪ್ರಜಾಪ್ರಭುತ್ವದ ರಚನೆಯನ್ನು ನಿರಾಕರಿಸಿದರು. ಈ ರೀತಿ ಇನ್ನೊಮ್ಮೆ ಭಾರತೀಯ ರಾಷ್ಟ್ರೀಯ ನಾಯಕತ್ವ ಕೊನೆಯ ಗಳಿಗೆಯಲ್ಲಿ ಭಾರತದ ರಾಜಕೀಯ ವ್ಯವಸ್ಥೆಯ ಮೇಲೆ ಚರಿತ್ರೆ ಹೊರಿಸಿದ ಕಾರ್ಯಭಾರಗಳನ್ನು ನಿರ್ವಹಿಸುವಲ್ಲಿ ಹಿಂದೇಟು ಹಾಕಿತು. ಭಾರತೀಯ ಪ್ರಭುತ್ವದ ಬಹು-ಜನಾಂಗೀಯ, ಬಹು ಭಾಷಿಯ ಹಾಗೂ ಬಹು-ರಾಷ್ಟ್ರೀಯತಾ ರಚನೆಯ ಬಗ್ಗೆ ಅವರಲ್ಲಿ ಅರಿವಿನ ಅಭಾವವೇನೂ ಇಲ್ಲದಿದ್ದರೂ, ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಯನ್ನು ಸುಭದ್ರಗೊಳಿಸಲು ಅಗತ್ಯವಾದ ಪೂರ್ವ-ಶರತ್ತುಗಳ ಬಗ್ಗೆ ತಿಳಿದಿದ್ದರೂ ಕೂಡಾ ಈ ಮುಖಂಡತ್ವ ಹೀಗೆ ಮಾಡಲು ಕಾರಣ ಅವರ ಸ್ವಂತದ ಬೂರ್ಜ್ವಾ ಸ್ವಭಾವ ಮತ್ತು ಹಿತಾಸಕ್ತಿಗಳು. ದೇಶ ಈಗಲೂ ಇಚ್ಛಾಶಕ್ತಿಯ ಆ ಅಭಾವದ ದುರಂತಕಾರೀ ಬೆಲೆ ತೆರುತ್ತಿದೆ— ಆದ್ದರಿಂದಲೇ ನೆಲ್ಲಿ, ಆದ್ದರಿಂದಲೇ ಭಿವಂಡಿ, ಆದ್ದರಿಂದಲೇ ಕಳೆದ 37 ವರ್ಷಗಳಲ್ಲಿ ಹಲವರನ್ನು ಬಲಿತೆಗೆದುಕೊಂಡ ಭಯಾನಕ ದಂಗೆಗಳು. ಕೇವಲ ಕೆಲವೇ ವರ್ಷಗಳೊಳಗೆ ಅದೇ ನಾಯಕತ್ವ ಸತತವಾಗಿ ಮುಂದುವರಿದ ಅಸಮಾನತೆ ಹುಟ್ಟು ಹಾಕಿದ ಸಾಮಾಜಿಕ ಕ್ಷೋಭೆ ಹೆಚ್ಚಲಾರಂಭಿಸಿದಾಗ ಅದನ್ನು ತಡೆಯಲು ಅಲ್ಲಿ ಸೇನೆ ಕೆಲಸಕ್ಕಿಳಿಯಿತು. ಸಾಮಾಜಿಕ ಬೆಳವಣಿಗೆಯ ಅವಶ್ಯಕತೆಗಳು ತಮ್ಮದೇ ಆದ ಒತ್ತಡವನ್ನು ನಿದಾಕ್ಷಿಣ್ಯವಾಗಿ ಹೇರುತ್ತವೆ. 1947 ರಲ್ಲಿ ಬ್ರಿಟಿಶರು ಮಾಡಿದ "ಭಾರತದ ವಿಸಂಘಟನೆ" ಯ ಒಂದು ದಶಕದ ನಂತರ ಕಾಂಗ್ರೆಸ್ ಕಾರ್ಯಕಾರೀ ಸಮಿತಿ "ರಾಷ್ಟ್ರೀಯ ಸಮಗ್ರತೆಯ ಸಮಸ್ತ ಪ್ರಶ್ನೆಯನ್ನು ಪರಿಶೀಲಿಸಲು" ಇಂದಿರಾ ಗಾಂಧಿಯ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಿಸಲು ನಿರ್ಧರಿಸಬೇಕಾಗಿ ಬಂತು.

(6ನೇ ಪುಟ ನೋಡಿ)

# ಅರುಣ್ ಶೌರಿ "ಬಯಲು" ಗೊಳಿಸಿದ ಟೊಳ್ಳು ಸಂಗತಿಗಳು

[5ನೇ ಪುಟದಿಂದ]

## ಕೃತಿಗಿಳಿಯದ ಮಾತುಗಳು

ಕೋಮುವಾದ, ಪ್ರತ್ಯೇಕತಾವಾದ ಮುಂತಾದವುಗಳು ಭುಗಿಲ್ಲೆನ್ನಲು ಕಾರಣಗಳನ್ನು ಪರೀಕ್ಷಿಸುತ್ತಾ ರಾಷ್ಟ್ರೀಯ ಸಮಗ್ರತಾ ಸಮಿತಿಯ ವರದಿ ಗಮನಿಸಿದ ಅಂಶಗಳಿವು-

"ಶಿಕ್ಷಣಾವಕಾಶ ಮತ್ತು ಭೌತಿಕ ಲಾಭದ ಆತುರ ಹಾಗೂ ಅವನ್ನು ತೃಪ್ತಿಪಡಿಸಲು ಸಾಲದಾಗಿರುವ ಅತೀ ಕೆಮ್ಮ ಸಂಪನ್ಮೂಲಗಳ ನಡುವಿನ ಅಂತರದಿಂದಾಗಿ ಒಂದು ಭಯಂಕರ ಸ್ಪರ್ಧಾತ್ಮಕ ಸ್ಥಿತಿ ಸೃಷ್ಟಿಯಾಗಿದೆ. ಇಂತಹ ಸ್ಥಿತಿಯಲ್ಲಿ ಮನುಷ್ಯ ತನಗೆ ಅತ್ಯಂತ ಪರಿಚಿತವಾದ ಅಂದರೆ ತನ್ನ ಸ್ವಂತ ಜಾತಿ ಅಥವಾ ಕೋಮು ನಿಷ್ಠೆಗೆ ಆತುಕೊಳ್ಳುತ್ತಾನೆ. ಪ್ರಗತಿ ಪ್ರಕ್ರಿಯೊಂದು ರೀತಿಯ ಗುಂಪು ಪ್ರತ್ಯೇಕತೆಯನ್ನೂ ಹೇತೆಗೊಳಿಸಿದೆಯೆಂಬುದು ವಿಕಟ ವಿಡಂಬನೆಯೇ ಸರಿ. ಆದಾಗ್ಯೂ ಅಂತಿಮವಾಗಿ ನಿಜವಾದ ಜಾತ್ಯತೀತತೆಯನ್ನು ತರುವಂತಹುದು ಅತ್ಯಂತ ವಿಶಾಲ ಅರ್ಥದ ಮತ್ತು ವ್ಯಾಪ್ತಿಯ ಶಿಕ್ಷಣ, ಜತೆಗೆ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಎಂಬುದು ವಾಸ್ತವ ಸಂಗತಿ 1957 ರ ಕಾಂಗ್ರೆಸ್ ಚುನಾವಣಾ ಘೋಷಣೆ ಹೇಳಿದಂತೆ ಜಾತ್ಯತೀತತೆಯೆಂದರೆ ನಂಬಿಕೆಯ ಅಭಾವವಲ್ಲ. ಬದಲಿಗೆ, ಎಲ್ಲಾ ನಂಬಿಕೆಗಳಿಗೆ ರಕ್ಷಣೆ ಮತ್ತು ಆಧ್ಯಾತ್ಮಿಕ, ನೈತಿಕ ಮೌಲ್ಯಗಳಿಗೆ ಉತ್ತೇಜನೆ." ಈ ಹಿಂದಿನಂತೆ ಕೃತಿಯ ಬದಲಿಗೆ ಕೇವಲ ಮಾತುಗಳು ; ಅವು ಎಂದೂ ಕಾರ್ಯರೂಪಕ್ಕಿಳಿಯವು.

ರಾಷ್ಟ್ರೀಯ ಸಮಗ್ರತಾ ಸಮಿತಿ 1961ರ ಏಪ್ರಿಲ್‌ನಲ್ಲಿ ಮತ್ತೆ ಸಭೆ ಸೇರಿತು ನಂತರ ಅದೇ ವರ್ಷ ಸೆಪ್ಟಂಬರ್– ಅಕ್ಟೋಬರ್ ಒಂದು ನಿಯಮಿತ ರಾಷ್ಟ್ರೀಯ ಸಮಗ್ರತಾ ಸಮ್ಮೇಳನವನ್ನು ದೆಹಲಿಯಲ್ಲಿ ನಡೆಸಿತು. ಈ ಸಮ್ಮೇಳನವು ಇಂತಹ ಸಲಹೆಗಳ ಒಂದು ದೀರ್ಘ ಪಟ್ಟಿಯನ್ನೇ ತಯಾರಿಸಿತು —25 ವರ್ಷಗಳ ಹಿಂದೆ. ಅದು ಒಂದು ರಾಷ್ಟ್ರೀಯ ಸಮಗ್ರತಾ ಪರಿಷತ್ತನ್ನೂ ಚುನಾಯಿಸಿತು. ಈ ಪರಿಷತ್ತು ಜೂನ್ 2 ಹಾಗೂ 3 ರಂದು ಸಭೆ ಸೇರಿ ಮತ್ತೊಮ್ಮೆ ಅದೇ ಸಲಹೆಗಳನ್ನು ಪುನರುಚ್ಚರಿಸಿತು.

1962ರ ಅಕ್ಟೋಬರ್‌ನಲ್ಲಿ ಚೀನಾ—ಭಾರತ ಗಡಿಬಿಕ್ಕಟ್ಟನ್ನು ಒಂದು ಒಳ್ಳೆಯ ನೆಪವಾಗಿ ಮಾಡಿ ಈ ರಾಷ್ಟ್ರೀಯ ಸಮಗ್ರತಾ ಪರಿಷತ್ತನ್ನು ಚೀನೀ ಅತಿಕ್ರಮಣದ ಬೆದರಿಕೆ ದೇಶದಲ್ಲಿ ಸಮಗ್ರತೆ ತಂದಿತೇ ನೋ, ಇನ್ನೇನೂ ಮಾಡಬೇಕಾಗಿಲ್ಲವೇನೋ ಎನ್ನುವಂತೆ ವಿಸರ್ಜಿಸಲಾಯಿತು.

ಆನಂತರ ಮತ್ತೊಮ್ಮೆ ಎಚ್ಚರಿಕೆಯ ಗಂಟೆ ಬಾರಿಸಲಾರಂಭಿಸಿದಾಗ ಮೊದಲು 1968 ರಲ್ಲಿ, ನಂತರ 1980 ರಲ್ಲಿ ರಾಷ್ಟ್ರೀಯ ಸಮಗ್ರತಾ ಸಮ್ಮೇಳನವನ್ನು ಮತ್ತೆ ಕರೆಯಲಾಯಿತು. ನಿಷ್ಕ್ರಿಯತೆಯ ಧೋರಣೆಯ ಮುಂದುವರಿಕೆಯನ್ನು ಮರೆಮಾಡುವ ಒಂದು ಅಲಂಕಾರ ಮಾತ್ರವಾಗಿ ಇದನ್ನು ಮಾಡಲಾಯಿತು.

## ಶೌರಿಯಂತವರಿಗೆ ನಾಚಿಕೆಯಾಗಬೇಕು

ಈ ಎಲ್ಲಾ ಅನುಭವಗಳಿಂದ ಪಾಠ ಕಲಿತೇ ನಾವು ಕಮ್ಯುನಿಸ್ಟರು ಭಾರತ ಸಂಘ ನಿಜವಾಗಿಯೂ ಒಕ್ಕೂಟ ಸ್ವಭಾವದ್ದಾಗಿರಬೇಕೆಂಬ ತತ್ತ್ವವನ್ನು ಸದಾ ಎತ್ತಿ ಹಿಡಿದಿದ್ದೇವೆ. ರಾಜ್ಯಗಳಿಗೆ ಪೂರ್ಣ ಸ್ವಯಮಾಧಿಕಾರವಿರಬೇಕು. ಇದರ ಅರ್ಥ ಭಾರತ ಸಂಘದಿಂದ ಪ್ರತ್ಯೇಕಗೊಳ್ಳುವ, ರಾಷ್ಟ್ರೀಯ ಐಕ್ಯತೆಯನ್ನು ಬುಡ ಮೇಲು ಮಾಡುವ ಹಕ್ಕಿರಬೇಕು ಎಂದು ಗೊಂದಲ ಮಾಡಿಕೊಳ್ಳಬೇಕಾಗಿಲ್ಲ. ಈ ಪರಿವೀಕ್ಷಣೆಯೇ ಕೇಂದ್ರ—ರಾಜ್ಯಗಳ ಸಂಬಂಧಗಳನ್ನು ಪುನರ್ರಚಿಸಬೇಕು ಎಂಬ ನಮ್ಮ ಬೇಡಿಕೆಗೆ, ಏಕ ಪಕ್ಷದ ನಿರಂಕುಶಾಧಿಕಾರವನ್ನು ಕೊನೆಗೊಳಿಸಿ ನಿಜವಾಗಿಯೂ ಒಂದು ಬಲಿಷ್ಠವಾದ, ರಾಜ್ಯಗಳು ತಮ್ಮ ನ್ಯಾಯಬದ್ಧ ಸ್ವಯಮಾಧಿಕಾರದ ಹಕ್ಕುಗಳನ್ನು ಅನುಭವಿಸುವ ಒಂದು ಭಾರತವನ್ನು ಕಟ್ಟಬೇಕು ಎನ್ನುವುದಕ್ಕೆ ಆಧಾರ ಭೂತ ಅಂಶ.

ರಾಷ್ಟ್ರೀಯತೆಯ ಪ್ರಶ್ನೆಯ ಬಗ್ಗೆ ಮಾರ್ಕ್ಸ್‌ವಾದೀ ಪರಿಕಲ್ಪನೆಯನ್ನು ಪರಿಹಾಸ್ಯ ಮಾಡುವ ಶೌರಿಯಂತವರು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಈ ಎರಡರ ಬೂರ್ಜ್ವಾ—ಭೂಮಾಲಕ ಮುಖಂಡರು ಹಿಂದೂ—ಮುಸ್ಲಿಂ ಐಕ್ಯತೆಯನ್ನು ಬುಡ ಮೇಲು ಮಾಡುವ ಸಾಮ್ರಾಜ್ಯ ಶಾಹೀ ಚಿಂತಾವಣೆಗೆ ದುರಾ ಸೆಚ್ಚು ನೋರಿ ಹಾಕಿಕೊಳ್ಳಬೇಕಾಗಿ ಒಂದು ಭಾರತದ ಅತ್ಯಂತ ಕ್ರೂರ ಕೋಮು ವಿಭಜನೆಗೆ ಬಲಿಬದ್ದರು ಎಂಬುದರ ಬಗ್ಗೆ ನಾಚಿಕೆಪಟ್ಟುಕೊಳ್ಳುವುದು ಒಳ್ಳೆಯದು.

ಈಗಲೂ ಆಳುವ ಕಾಂಗ್ರೆಸ್ಸಿನ ಮುಖಂಡತ್ವವಾಗಲೀ, ಮುಸ್ಲಿಂ ಕೋಮುವಾದಿ ಮುಖಂಡತ್ವವಾಗಲಿ ಕೋಮು ಭಾವಾತಿರೇಕಗಳಿಗೆ ಗಾಳಿ ಹಾಕುವಾಗಲಾಗಲೀ ಮತ್ತೆ ಮತ್ತೆ ಸಂಭವಿಸುವ ಕೋಮು ದಂಗೆಗಳನ್ನು ಎದುರಿಸುವಾಗಲಾಗಲೀ ತಾವು ಎತರಹ ಬೆಂಕಿಯೊಂದಿಗೆ ಆಟವಾಡುತ್ತಿದ್ದೇವೆ ಎಂಬುದನ್ನು ಅರಿತಿಲ್ಲ ಇಂತಹ ದಂಗೆಗಳಲ್ಲಿ ಅತ್ಯಂತ ಹೆಚ್ಚು ತೊಂದರೆಗೀಡಾಗುವುದು ಅಲ್ಪ ಸಂಖ್ಯಾತ ಕೋಮಿನವರೇ.

ಅದೇ ರೀತಿ ಈ ಎರಡೂ ಮುಖಂಡತ್ವಗಳು ಈಗಲೂ ಭಾರತ ಸಂಘ, ಬಾಂಗ್ಲಾದೇಶ ಮತ್ತು ಪಾಕಿಸ್ತಾನದಲ್ಲಿ ಬಹು-ಭಾಷಾ, ಬಹು - ಜನಾಂಗ-ರಾಷ್ಟ್ರೀಯ ಮತ್ತು ಬಹು-ಕೋಮು ಪ್ರಭುತ್ವಗಳಲ್ಲಿ ಜೀವಿಸುತ್ತಿದ್ದೇವೆ ಎಂಬುದನ್ನು ಅರಿಯುವಲ್ಲಿ ವಿಫಲರಾಗಿದ್ದಾರೆ. ಅದೇ ಹೊತ್ತಿನಲ್ಲಿ ಈ ದೇಶಗಳಲ್ಲಿ ಅಧಿಕಾರಕ್ಕೆ ಬರಲು, ಭಾರತೀಯ ಉಪಖಂಡದ ಜನಾಂಗ—ರಾಷ್ಟ್ರೀಯತೆಗಳ ಪ್ರಜಾಪ್ರಭುತ್ವವಾದೀ ಬಯಕೆಗಳನ್ನು ಮತ್ತು ಬೇಡಿಕೆಗಳನ್ನು ನಿರಾಕರಿಸಲು ತಮ್ಮಿಂದಾದುದನ್ನೆಲ್ಲಾ ಮಾಡುತ್ತಿದ್ದಾರೆ.

ಈ ಸಂಪೂರ್ಣ ಪ್ರಶ್ನೆಯ ಬಗ್ಗೆ ನಿರ್ದಿಷ್ಟ ಅಭಿಪ್ರಾಯಗಳಿರುವುದು ಸಿ. ಪಿ. ಐ. (ಎಂ) ಮತ್ತು ಇತರ ಎಡಪಕ್ಷಗಳಿಗೆ ಮಾತ್ರ. ಈ ಬಗ್ಗೆ ಮುಂದಿನ ಲೇಖನದಲ್ಲಿ ಪರಿಶೀಲಿಸೋಣ. ★

---

# ಸರ್ಕಾರಗಳ ವಜಾ – ಕೇರಳದಿಂದ ಕಾಶ್ಮೀರದವರೆಗೆ

(3ನೇ ಪುಟದಿಂದ)

ಆದ ದೃಷ್ಟಿ ಬಿ.ಜೆ.ಪಿ. ಗಿದೆ. ಇದು ಜುಲೈ 15ರ "ಆರ್ಗನೈಸರ್"ನ ಸಂಪಾದಕೀಯದಲ್ಲಿ ಸ್ಪಷ್ಟವಾಗಿ ಮೂಡಿದೆ. ಅದರಲ್ಲಿ "ಶಾಂತಿಯನ್ನು ಕೆಡಿಸುವ ನಿಜವಾದ ಖಳನಾಯಕ" ಎಂದು ಅದು ಭಾವಿಸುವ "ಸಂವಿಧಾನದ 370ನೇ ವಿಧಿಯನ್ನು ರದ್ದು ಮಾಡಿ ಸಂಪೂರ್ಣವಾಗಿ ಸ್ವಚ್ಛಗೊಳಿಸಲು" ಒಂದು ಕರೆಯನ್ನು ನೀಡಲಾಗಿದೆ. ಈಗಾಗಲೇ ತಿಳಿದಿರುವಂತೆ ಈ ನಿಲುವನ್ನು ಹೆಚ್ಚಿನ ವಿರೋಧ ಪಕ್ಷಗಳು ತಳೆಯಲಾರವು ಮತ್ತು ತಳೆಯುವುದಿಲ್ಲ ಕೂಡಾ.

ಜುಲೈ 13ರ ಹುತಾತ್ಮರ ದಿನದಲ್ಲಿ ನಾವು ಅನೇಕರು ಭಾಗವಹಿಸಿದ್ದರೂ ಭಾಗವಹಿಸಬೇಕೆಂದು ಡಾ ಅಬ್ದುಲ್ಲಾರವರು ನೀಡಿದ್ದ ಆಹ್ವಾನವನ್ನು ಬಿ.ಜೆ.ಪಿ. ನಿರಾಕರಿಸಲು ಇದೇ ಕಾರಣ. ಕಾಶ್ಮೀರದ ಕುರಿತು ಬಿ.ಜೆ.ಪಿ. ಗೆ ಭಿನ್ನವಾದ ದೃಷ್ಟಿಯಿದ್ದರೂ ಕೂಡ ಮಂತ್ರಿಮಂಡಲ ಉರುಳಿಸಿದ್ದನ್ನು ಇತರ ವಿರೋಧ ಪಕ್ಷಗಳೊಂದಿಗೆ ಸೇರಿ ಪ್ರತಿಭಟಿಸಿದ್ದು, ದೇಶದ ರಾಜಕೀಯದಲ್ಲಾಗುತ್ತಿರುವ ಮಹತ್ತರ ಬದಲಾವಣೆಯ ಸೂಚಕವಾಗಿದೆ. ಆರ್.ಎಸ್.ಎಸ್ ನ ಮುಸ್ಲಿಂ ವಿರೋಧಿ ಪೂರ್ವಾಗ್ರಹ ಕೂಡ ಬಿ.ಜೆ.ಪಿ. ಯನ್ನು ಘಟನೆಯ ವಿರುದ್ಧ ಪ್ರತಿಭಟಿಸುವುದನ್ನು ತಪ್ಪಿಸಲಾಗಲಿಲ್ಲ.

ಕಾಶ್ಮೀರದ ಘಟನೆಯ ವಿರುದ್ಧ ಇಡೀ ಜನತೆ ಸಿಡಿದೆದ್ದಿರುವುದು ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ವಿರೋಧ ಪಕ್ಷಗಳಿಗೆ ಒಂದು ಸ್ಫೂರ್ತಿದಾಯಕ ಸನ್ನಿವೇಶವಾಗಿದೆ.

ಅನು : ಉದಯ

---

ಸಿಂಧನೂರು

## ವಿದ್ಯಾರ್ಥಿಗಳ ಹೋರಾಟಕ್ಕೆ ಜಯ

ಇಲ್ಲಿನ ಟಿ ಟಿ ಐ. ಸಂಸ್ಥೆಯ ಶಾರೀರಿಕ ಶಿಕ್ಷಕರಾದ ಕೆ. ಸಿ. ಹೋಸಮಠರ ದುರ್ವರ್ತನೆ ಬೇಜವಾಬ್ದಾರಿ ಮತ್ತು ಜಾತಿಯತೆಯ ವಿರುದ್ಧ ಟಿ.ಟಿ.ಐ. ವಿದ್ಯಾರ್ಥಿಗಳು ಎಸ್ ಎಫ್. ಐ. ನೇತೃತ್ವದಲ್ಲಿ 4-7-84 ರಿಂದ ವರ್ಗಗಳನ್ನು ಬಹಿಷ್ಕರಿಸಿ 11-7-84ರ ವರೆಗೆ ಧರಣಿ ಸತ್ಯಾಗ್ರಹ ಮತ್ತು 13 ಮತ್ತು 14-7-84ರ ವರೆಗೆ ಉಪವಾಸ ಸತ್ಯಾಗ್ರಹ ಕೈಕೊಂಡಾಗ ಕೆ.ಸಿ. ಹೋಸಮಠರ ಸ್ಥಾನದಲ್ಲಿ ತಾತ್ಕಾಲಿಕವಾಗಿ ಬೇರೆ ಶಿಕ್ಷಕರನ್ನು ನೇಮಿಸಲಾಗಿದ್ದು ಕೆ. ಸಿ. ಹೋಸಮಠರಿಗೆ ವರ್ಗವಾಗುವ ಅನುಮತಿಬಂದಿದ್ದು ಟಿ.ಟಿ.ಐ ವಿದ್ಯಾರ್ಥಿಗಳ ಹೋರಾಟಕ್ಕೆ ಜಯ ಲಭಿಸಿದೆ.

---

## ರಾಯಚೂರು ತಾಲೂಕ್ ರೈತ ಸಮ್ಮೇಳನ

ರಾಯಚೂರ್ ತಾಲೂಕ್ ರೈತ ಸಂಘದ ಸಮ್ಮೇಳನ ರಾಯಚೂರ್ ರೈತಭವನದಲ್ಲಿ ಚಂದ್ರಶೇಖರ ಬಾಳಿಯವರ ಅಧ್ಯಕ್ಷತೆಯಲ್ಲಿ ಸೇರಿತ್ತು. 50 ಹಳ್ಳಿಗಳಿಂದ ಪ್ರತಿನಿಧಿಗಳು ಬಂದಿದ್ದರು. ಸಂಘಟನೆ ಕಟ್ಟಲು ಎದುರಾಗುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸಿ ಇದೇ ತಾಲೂಕಿನಲ್ಲಿ ರೈತ ಸಂಘದ ಚಟುವಟಿಕೆ ಬೆಳೆಸುವ ಕುರಿತು ತೀರ್ಮಾನಿಸಲಾಯಿತು. ಬಸವರಾಜ, ಲಿಂಗಪ್ಪ, ಪೂಜಾರ್, ಮಲ್ಲಿಕಾರ್ಜುನ,ಕರಿಯಪ್ಪ, ಚಂದ್ರಶೇಖರಗೌಡ ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು, ರಾಮನಗೌಡ ಅಧ್ಯಕ್ಷರಾಗಿಯೂ, ತಿಪ್ಪಣ್ಣ ಶಾಕೋರಿ ಉಪಾಧ್ಯಕ್ಷರಾಗಿಯೂ, ಆರ್. ಬಸವರಾಜ್, ಎಚ್. ಎಂ. ನಾಯ್ಕುಡ್ಕಾರ್ಯದರ್ಶಿಯಾಗಿ,ಲಿಂಗಪ್ಪ ಪೂಜಾರ್ ಖಜಾಂಚಿಯಾಗಿರುವ ಸಮಿತಿ ಆರಿಸಲಾಯಿತು.

ಕಾ. ರಾಘವೇಂದ್ರಕುಷ್ಟಗಿ ಯುವಜನ ಸಂಘಟನೆಯ ಪರವಾಗಿ ಕಾ. ಶ್ಯಾಮಲಾ ಪೂಜಾರ್ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಪರವಾಗಿಯೂ ಸಮಾವೇಶಕ್ಕೆ ಶುಭಕೋರಿ ಮಾತಾಡಿದರು,

---

## ಪುಸ್ತಕ ಸ್ವೀಕಾರ

1 ಮಾರ್ಕ್ಸ್‌ವಾದ ಮತ್ತು ಭಗವದ್ಗೀತೆ
ಲೇಖಕರು : ಎಸ್. ಜಿ. ಸರ್ದೇಸಾಯಿ ಮತ್ತು ದಿಲೀಪ್ ಬೋಸ್
ಬೆಲೆ ರೂ 8- ಪುಟಗಳು-148

2 ಸಂಗ್ರಹ ಭಾರತಾಯಣ(ರಾಜಕೀಯ ವಿಡಂಬನೆ)
ಲೇಖಕ - ವ್ಯಾಸರಾಯ ಬಲ್ಲಾಳ
ಬೆಲೆ ರೂ. 7 ಪುಟಗಳು—116

3 ಮೂರು ಚಿತ್ರ ಮೂರು ದಾರಿ ಲೇಖಕ : ಜಿ ವಿ. ಅಯ್ಯರ್
ಬೆಲೆ ರೂ. 8 ಪುಟಗಳು—88

4 ಕಮ್ಯೂನಿಸಂ (ನಾಲ್ಕನೆಯ ಮುದ್ರಣ)
ಲೇಖಕ : ಬಿ.ವಿ. ಕಕ್ಕಿಲ್ಲಾಯ ಬೆಲೆ ರೂ. 2, ಪುಟಗಳು-62
ಈ ಮೇಲಿನ ನಾಲ್ಕೂ ಪುಸ್ತಕಗಳ ಪ್ರಕಾಶಕರು :
ನವಕರ್ನಾಟಕ ಪಬ್ಲಿಕೇಶನ್ಸ್ (ಪ್ರೈ) ಲಿಮಿಟೆಡ್.
ಸುಬೇದಾರ್ ಛತ್ರಂ ರಸ್ತೆ, ಬೆಂಗಳೂರು-9

1 ಮಾಡಬೇಕಾದುದೇನು? ಲೇಖಕರು– ವಿ.ಐ. ಲೆನಿನ್
ಬೆಲೆ 3-25 ಪುಟಗಳು—320

2 ಮಾರ್ಕ್ಸ್‌ವಾದಿ—ಲೆನಿನ್‌ವಾದಿ ಬೋಧೆಯ
ಮೂಲ ಪಾಠಗಳು(ಕೈಪಿಡಿ) ಬೆಲೆ ರೂ 8 ಪುಟಗಳು-424
ಮೇಲಿನ ಎರಡೂ ಪುಸ್ತಕಗಳ ಪ್ರಕಾಶಕರು
ಪ್ರಗತಿ ಪ್ರಕಾಶನ, ಮಾಸ್ಕೋ.

3 ಸಾಪೇಕ್ಷ ಸಿದ್ಧಾಂತವು ಎಂತಹುದು?
ಲೇಖಕರು -ಎಲ್.ಲಂಡಾ ಮತ್ತು ವೈ. ರೂಮೆರ್
ಬೆಲೆ 2-50 ಪುಟಗಳು—72
ಇದರ ಪ್ರಕಾಶಕರು-ಮಿರ್ ಪ್ರಕಾಶನ, ಮಾಸ್ಕೋ.
ಅಧಿಕೃತ ಮಾರಾಟಗಾರರು-ನವಕರ್ನಾಟಕ ಪಬ್ಲಿಕೇಶನ್ಸ್

## ಅಂತರರಾಷ್ಟ್ರೀಯ

### ಬ್ರಿಟನ್ ಕಲ್ಲಿದ್ದಲು ಕಾರ್ಮಿಕರ ಧೀರ ಹೋರಾಟ

ಕಳೆದ 19 ವಾರಗಳಿಂದ ಬ್ರಿಟನ್ನಿನಲ್ಲಿ ಎರಡು ಲಕ್ಷ ಕಲ್ಲಿದ್ದಲು ಗಣಿ ಕಾರ್ಮಿಕರು ತಮ್ಮ ಮೂಲಭೂತಬೇಡಿಕೆಗಳಾದ ಉದ್ಯೋಗದ ಭದ್ರತೆ, ಉದ್ಯೋಗದ ಪರಿಸ್ಥಿತಿಯಲ್ಲಿ ಸುಧಾರಣೆ, ಹೋರಾಟದ ಮೂಲಕ ಗಳಿಸಿರುವ ಟ್ರೇಡ್ ಯೂನಿಯನ್ ಹಕ್ಕುಗಳನ್ನು ಕಿತ್ತುಕೊಳ್ಳುವ ವಿರುದ್ಧ, ಕಾರ್ಮಿಕ ವಿರೋಧೀ ಮಸೂದೆಗಳನ್ನು ವಾಪಸ್ ಪಡೆಯಬೇಕೆಂದು ಒತ್ತಾಯಿಸಿ ಮುಷ್ಕರ ನಡೆಸುತ್ತಿದ್ದಾರೆ.

ಮಾರ್ಗರೇಟ್ ಥ್ಯಾಚರ್ ಅವರ ಸರ್ಕಾರವು ಅಧಿಕಾರಕ್ಕೆ ಬಂದಂದಿನಿಂದಲೂ ಕಾರ್ಮಿಕ ಹಕ್ಕುಗಳನ್ನು ಮೊಟಕುಗೊಳಿಸುವುದನ್ನೆ ತನ್ನ ಕಸುಬನ್ನಾಗಿಸಿಕೊಂಡಿದೆ. ಕಾರ್ಮಿಕರನ್ನು ಒಡೆದು ಆಳುವ ತನ್ನ ತಂತ್ರಗಳೆಲ್ಲಾ ವಿಫಲವಾದ ನಂತರ ಲಾಭದಾಯಕವಾಗಿಲ್ಲದ ಕಲ್ಲಿದ್ದಲು ಗಣಿಗಳನ್ನು ಮುಚ್ಚಿಬಿಡುವುದಾಗಿ ಸರ್ಕಾರ ಘೋಷಿಸಿತು. ಇದರಿಂದ 26 ಸಾವಿರ ಕಾರ್ಮಿಕರು ನಿರುದ್ಯೋಗಿಗಳಾಗಬೇಕಾಗಿತ್ತು. ಇದನ್ನು ಬ್ರಿಟನ್ನಿನ ಕಾರ್ಮಿಕವರ್ಗ ಪ್ರಬಲವಾಗಿ ಪ್ರತಿಭಟಿಸುತ್ತಾ ಬಂದಿದೆ.

ಈಗ ಜುಲೈ 10 ರಿಂದ ಬ್ರಿಟನ್ನಿನಾದ್ಯಂತ ಇರುವ ಬಂದರು ಮತ್ತು ಹಡಗುಕಟ್ಟೆ ಕಾರ್ಮಿಕರು ಮುಷ್ಕರಕ್ಕಿಳಿದಿದ್ದಾರೆ.

ಇದರಿಂದಾಗಿ ಬ್ರಿಟನ್ನಿನ ಎಲ್ಲಾ ಬಂದರುಗಳು ಸಂಪೂರ್ಣ ಸ್ತಬ್ಧಗೊಂಡಿವೆ. ಥ್ಯಾಚರ್ ಸರ್ಕಾರ ತೀವ್ರ ಬಿಕ್ಕಟ್ಟಿಗೆ ಒಳಗಾಗಿದೆ. ಹತಾಶಗೊಂಡಿರುವ ಸರ್ಕಾರ ಚಳವಳಿಯನ್ನು ಛಿದ್ರಗೊಳಿಸಲು ಮಿಲಿಟರಿಯನ್ನು ಬಳಸುವುದಾಗಿ ಬೆದರಿಕೆ ಹಾಕುತ್ತಿದೆ.

### ಚೀನಾ ಭೇಟಿ—ಐಕ್ಯತೆಯ ವೃದ್ಧಿ

ವಿಶ್ವ ಯುವಜನ ಐಕ್ಯತೆಗೆ, ಜಾಗತಿಕ ಶಾಂತಿಗೆ ತಮ್ಮ ಚೀನಾ ಭೇಟಿ ಸಹಕಾರಿಯಾಗಿದೆ ಎಂದು ಎರಡು ವಾರಗಳ ಕಾಲ ಚೀನಾ ಪ್ರವಾಸ ಮಾಡಿ ತಾಯ್ನಾಡಿಗೆ ಹಿಂದಿರುಗಿದ ಎಸ್. ಎಫ್. ಐ ಮತ್ತು ಡಿ.ವೈ.ಎಫ್.ಐ ನಿಯೋಗಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿವೆ.

ಆಲ್ ಚೈನಾ ಯೂತ್ ಫೆಡರೇಶನ್‌ನ ಆಹ್ವಾನದ ಮೇರೆಗೆ ಚೀನಾಕ್ಕೆ ಭೇಟಿ ನೀಡಿದ ಈ ಪ್ರತಿನಿಧಿಗಳು ಎರಡೂ ದೇಶಗಳ ಯುವ ಜನರ ಸಮಸ್ಯೆಗಳ ಕುರಿತು, ಜಾಗತಿಕ ಯುವಜನ ಸಮಸ್ಯೆಗಳ ಕುರಿತು ಧೀರ್ಘವಾಗಿ ಚರ್ಚಿಸಿದರು. ನೆರೆಹೊರೆಯ ರಾಷ್ಟ್ರಗಳ ಜೊತೆ ಸಹಕಾರ, ಭಾಂದವ್ಯಗಳನ್ನು ವೃದ್ಧಿಸಿಕೊಳ್ಳಲು ಚರ್ಚೆ ನಡೆಯಿತು. ಹಿಂದೆ ನಡೆದ ಕೆಲವು ತಪ್ಪುಗಳನ್ನು ಸರಿಪಡಿಸಿಕೊಂಡು ಚೀನಾ ಈಗ ಪುನರ್ ನಿರ್ಮಾಣದತ್ತ ಸಾಗುತ್ತಿದೆ, ಇದರಲ್ಲಿ ಚೀನಾ ಯುವ ಜನರು ಪ್ರಮುಖ ಪಾತ್ರ ವಹಿಸಿದ್ದಾರೆ. ಎಲ್ಲಾ ರಂಗಗಳಲ್ಲೂ ಚೀನಾ ಅದ್ಭುತ ಪ್ರಗತಿ ಸಾಧಿಸುತ್ತಿದೆ ಸಮಾಜದ ಎಲ್ಲಾ ರಂಗಗಳಲ್ಲಿಯೂ ಸ್ತ್ರೀಯರಿಗೆ ಸಮಾನ ಹಕ್ಕುಗಳು ದೊರೆಯುತ್ತಿವೆ, ಎಂದು ಪ್ರತಿನಿಧಿಗಳು ತಿಳಿಸಿದ್ದಾರೆ.

### ಡಿ. ವೈ. ಎಫ್. ಐ. ರಾಜ್ಯ ಸಮಿತಿಯ ಸಭೆ

ಡಿ. ವೈ. ಎಫ್. ಐ. ರಾಜ್ಯ ಸಮಿತಿಯ ಸಭೆಯು 1984 ಆಗಸ್ಟ್ 11 ಮತ್ತು 12 ಶನಿವಾರ, ಭಾನುವಾರ ದ. ಕ. ಜಿಲ್ಲೆಯ ಕುಂದಾಪುರದಲ್ಲಿ ಸೇರುತ್ತದೆ.

ಈ ಸಭೆಗೆ ಕೇಂದ್ರ ಸಮಿತಿಯ ಉಪಾಧ್ಯಕ್ಷರಾದ ಕಾಂ. ಇ. ಪಿ ಜಯರಾಜನ್ ಅವರು ಬರುತ್ತಾರೆ. ಜಯರಾಜನ್ ಅವರು ರಾಜ್ಯ ಸಂಘಟನೆಯನ್ನು ಮತ್ತೂ ಬಲಪಡಿಸುವುದರ ಬಗ್ಗೆ ದ. ಕ. ಜಿಲ್ಲೆಯಲ್ಲಿ ಹಲವು ಸಭೆಗಳನ್ನು ನಡೆಸುವುದಲ್ಲದೆ, ಇತ್ತೀಚಿನ ಕೇಂದ್ರ ಸಮಿತಿಯ ಚೀನಾ ರಾಷ್ಟ್ರದ ಪ್ರವಾಸದ ಬಗ್ಗೆಯೂ ಮತ್ತು ಕೇಂದ್ರ ಸಮಿತಿಯ ತೀರ್ಮಾನಗಳ ಬಗ್ಗೆಯೂ ಮಾತನಾಡುತ್ತಾರೆ.

ಎಲ್ಲಾ ರಾಜ್ಯ ಸಮಿತಿಯ ಸದಸ್ಯರು 10-8-84 ರ ಸಂಜೆಯೊಳಗೆ ಕುಂದಾಪುರವನ್ನು ತಲುಪಬೇಕೆಂದು ವಿನಂತಿ.

ಎಸ್. ಶಿವರಾಂ
ರಾಜ್ಯ ಕಾರ್ಯದರ್ಶಿ

## ಕೆ. ಎ. ಎಲ್ - ಬೇಹುಗಾರಿಕೆ ವಿಮಾನ

ಕಳೆದ ಸೆಪ್ಟಂಬರ್ 1 ರಂದು ಸೋವಿಯತ್ ಪ್ರದೇಶದೊಳಗೆ 400 ಕಿ. ಮಿ. ಒಳ ಬಂದಿದ್ದ ಕೊರಿಯನ್ ಏರ್ ಲೈನ್ಸ್ ವಿಮಾನ ಬೇಹುಗಾರಿಕೆ ನಡೆಸಲು ಬಂದಿತ್ತೆಂದು ಬ್ರಿಟನ್‌ನ ಖ್ಯಾತ ಪತ್ರಿಕೆ "ಡಿಫೆನ್ಸ್ ಅಟ್ಯಾಚೆ" ಖಚಿತವಾದ ಸಾಕ್ಷ್ಯಗಳೊಡನೆ ತಿಳಿಸಿದೆ. ಕೊರಿಯಾದ ಬೋಯಿಂಗ್ 747 'ತಪ್ಪು ತಿಳುವಳಿಕೆಯಿಂದ' ಸೋವಿಯತ್ ಪ್ರದೇಶದೊಳಗೆ ನುಸುಳಲಿಲ್ಲ ಬದಲಾಗಿ ನಾಗರೀಕ ವಿಮಾನವನ್ನು ಮಿಲಿಟರಿ ಬೇಹುಗಾರಿಕೆಗಾಗಿ ಬಳಸಲಾಗಿತ್ತೆಂದು ಪತ್ರಿಕೆ ತಿಳಿಸಿದೆ.

ಇದುವರೆಗೆ ಪ್ರಕಟಿಸಿಲ್ಲದ ಮತ್ತು ದೊರೆಯುವ ಇನ್ನಿತರ ಎಲ್ಲ ಸಾಕ್ಷ್ಯಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿ ಪತ್ರಿಕೆ ಈ ನಿರ್ಧಾರಕ್ಕೆ ಬಂದಿದೆ. ಅಮೇರಿಕದ ಮಿಲಿಟರಿ ಚಟುವಟಿಕೆಗಳ ಬಗ್ಗೆ ಅಧಿಕಾರಯುತವಾಗಿ ಮಾತನಾಡುವ ಕೆನತ್ ಲಾರಿನ್ಸ ಕೊರಿಯಾದ ವಿಮಾನದ ಬೇಹುಗಾರಿಕೆ ಬಗ್ಗೆ ತನಗೆ ಮೊದಲಿಂದಲೂ ಸಂಶಯವಿರಲಿಲ್ಲವೆಂದು ಸಂದರ್ಶನವೊಂದರಲ್ಲಿ ತಿಳಿಸಿದ್ದಾರೆ.

ಅಮೇರಿಕದ ರಕ್ಷಣಾ ಕಾರ್ಯದರ್ಶಿ ಕ್ಯಾಸ್‌ಪರ್ ವಿಯಿನ್ ಬರ್ಗರ್ ಪತ್ರಿಕೆಯ ಸಾಕ್ಷ್ಯಗಳನ್ನು, ವಾದಗಳನ್ನು ಎದುರಿಸಲಾರದೆ ಇದೆಲ್ಲ ಕೇವಲ ಅಮೇರಿಕದ ಆಡಳಿತವನ್ನು ಹಳಿಯುವ ಪ್ರಯತ್ನವೆಂದು ಅರ್ಥ ಪ್ರಲಾಪವೆತ್ತಿದ್ದಾರೆ.

### ಪಶ್ಚಿಮ ರಾಷ್ಟ್ರಗಳಲ್ಲಿ ಬೆಳೆಯುತ್ತಿರುವ ನಿರುದ್ಯೋಗ

ಬಂಡವಾಳಶಾಹಿ ಪದ್ಧತಿಯನ್ನು "ಮಾನವೀಯ ಸಮಾಜವೆಂದು" ನಾಚಿಕೆಯಿಲ್ಲದೆ ಕೊಂಡಾಡುವ ಸಮಯದಲ್ಲೇ ಅತ್ಯಂತ ಮೂಲಭೂತ ಹಕ್ಕಾದ ದುಡಿಯುವ ಹಕ್ಕಿನಿಂದ ಜನತೆ ಈ ಸಮಾಜದಲ್ಲಿ ವಂಚಿತರಾಗಿದ್ದಾರೆ. ಈ ರಾಷ್ಟ್ರಗಳಲ್ಲಿ ಕೆಲಸವಿಲ್ಲದ ಜನತೆ ಉದ್ಯೋಗ ವಿನಿಮಯಗಳಿಗೆ ಮುತ್ತಿಗೆ ಹಾಕುತ್ತಿದ್ದಾರೆ.

"ಮುಕ್ತ ಜಗತ್ತಿನ" ದೇಶಗಳಲ್ಲೇ ಅತಿಹೆಚ್ಚು ನಿರುದ್ಯೋಗಿಗಳನ್ನು ಹೊಂದಿರುವ "ಗೌರವ" ಅಮೇರಿಕಕ್ಕೆ ಸಂದಿದೆ ಅಧಿಕೃತ ಅಂಕಿ ಸಂಖ್ಯೆಗಳ ಅನ್ವಯವೇ ನಿರುದ್ಯೋಗಿಗಳ ಸಂಖ್ಯೆ 8.5 ಮಿಲಿಯನ್ ದಾಟಿದೆ. ಇಟಲಿಯಲ್ಲಿ 3.1 ಮಿಲಿಯನ್, ಬ್ರಿಟನ್ನಿನಲ್ಲಿ 3. ಮಿಲಿಯನ್ ಪಶ್ಚಿಮ ಜರ್ಮನಿಯಲ್ಲಿ 2.25 ಮಿಲಿಯನ್ ಫ್ರಾನ್ಸ್‌ನಲ್ಲಿ 2.23 ಮಿಲಿಯನ್ ನಿರುದ್ಯೋಗಿಗಳಿದ್ದಾರೆ.

ಎಂದಿನಂತೆ ಈಗಾಗಲೇ ತಾರತಮ್ಯ ನೀತಿಯಿಂದಾಗಿ ದುರವಸ್ಥೆಯಲ್ಲಿರುವವರಿಗೇ ನಿರುದ್ಯೋಗದ ಬಿಸಿ ಹೆಚ್ಚಾಗಿ ತಗುಲಿದೆ. ಜನಾಂಗೀಯ ಧೋರಣೆಯಿಂದ ಪ್ರೇರಿತವಾದ ಅಮೇರಿಕನ್ ಬೂರ್ಜ್ವಾ ಸಮಾಜವು ಕರಿಯರನ್ನೇ ಮೊದಲು ಕೆಲಸದಿಂದ ವಜಾ ಮಾಡುತ್ತದೆ ಯುವಜನತೆ ಮತ್ತು ಮಹಿಳಾ ಕಾರ್ಮಿಕರು ನಿರುದ್ಯೋಗದ ಹೊರೆಯನ್ನು ಹೆಚ್ಚಾಗಿ ಹೊರಬೇಕಾಗಿದೆ.

### ಬಳ್ಳಾರಿಯಲ್ಲಿ ಎಸ್. ಎಫ್. ಐ. ನಾಯಕರ ಮೇಲೆ

## ಪೋಲೀಸ್ ದೌರ್ಜನ್ಯ

ಬಳ್ಳಾರಿ ನಗರಕ್ಕೆ ಸುಮಾರು ಏಳು ಕಿ ಮೀ ದೂರದಲ್ಲಿ ಹೊರವಲಯದಲ್ಲಿರುವ ಅಲ್ಲಿಪುರದ ಹಾಸ್ಟೆಲೊಂದರಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವಂತೆ ಒತ್ತಾಯಿಸಿ ಎಸ್.ಎಫ್.ಐ. ಹಾಸ್ಟೆಲ್ ಸಮಿತಿಯು ಆಡಳಿತಾಧಿಕಾರಿ ಸಿದ್ಧಾರ್ಥನಂದ ಸ್ವಾಮೀಜಿಯವರಿಗೆ ಜುಲೈ 10 ರಂದು ಮನವಿಯೊಂದನ್ನು ಸಲ್ಲಿಸಿತು. ಸ್ವಾಮಿಜಿಯು ಬಡ ವಿದ್ಯಾರ್ಥಿಗಳ ಅಹವಾಲನ್ನು ಸಮಾಧಾನ-ಭೂತಿಯಿಂದ ಪರಿಶೀಲಿಸುವ ಬದಲು ದರ್ಪದಿಂದ ಉತ್ತರಿಸಿದ್ದಲ್ಲದೆ ಪೋಲೀಸರಿಗೆ ದೂರು ನೀಡಿದರು. ಸರ್ಕಾರದಿಂದ ಸಹಾಯಧನ ಪಡೆಯುತ್ತಿದ್ದರೂ ಈ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳಿಗೆ ಹೊಟ್ಟೆ ತುಂಬ ಊಟವಿಲ್ಲವಾದರೂ ಪ್ರಾರ್ಥನೆಯ ಹೆಸರಿನಲ್ಲಿ ಕೊರೆಯುವ ಚಳಿಯಲ್ಲಿ ಬಯಲು ಪ್ರದೇಶದಲ್ಲಿ ಗಂಟೆಗಟ್ಟಲೆ ನಡುಗುತ್ತಾ ನಿಲ್ಲುವ ಶಿಕ್ಷೆ ಲಭ್ಯವಿದೆ. ಹಾಸ್ಟೆಲ್‌ನ ಎಲ್ಲಾ ಕೆಲಸಗಳಿಗೂ ವಿದ್ಯಾರ್ಥಿಗಳೇ ಸೇವಕರು, ನಿವೃತ್ತ ಅಧಿಕಾರಿಯಾದ ಶ್ರೀಮಾನ್ ಸಿದ್ಧಪ್ಪನವರು ಇದೀಗ ಖಾವಿ ವೇಷ ತೊಟ್ಟು ಸಿದ್ಧಾರ್ಥನಂದ ಸ್ವಾಮೀಜಿಯವರಾಗಿದ್ದಾರೆ. ಮಾನ್ಯರು ಹಳೆಯ ಮತ್ತು ಬದಲಾಯಿಸಿದ ಹೆಸರುಗಳಲ್ಲಿ ಅನೇಕ ಬ್ಯಾಂಕ್‌ಗಳಲ್ಲಿ ಸಾಕಷ್ಟು ಠೇವಣಿ ಹಣ ಜಮಾವಣೆ ಮಾಡಿರುವುದಲ್ಲದೆ ಬೆಂಗಳೂರಿನ ಚಿತ್ರಮಂದಿರವೊಂದರ ಮಾಲಿಕತ್ವವನ್ನೂ ಹೊಂದಿದ್ದಾರೆಂದು ತಿಳಿದು ಬಂದಿದೆ. ಬಡ ವಿದ್ಯಾರ್ಥಿಗಳ ಹೊಟ್ಟೆ ತಟ್ಟಿ ಈ ಸ್ವಾಮೀಜಿ ಗಣ್ಯ ವ್ಯಕ್ತಿಯಾಗಿ ಬೆಳೆದಿದ್ದಾರೆ.

ನೊಂದ ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿ ಕೊಡಲು ಹೋದ ಎಸ್. ಎಫ್. ಐ. ಬಳ್ಳಾರಿ ನಗರ ಸಮಿತಿಯ ಪದಾಧಿಕಾರಿಗಳಾದ ಕಾಮ್ರೇಡ್ ಪ್ರಸನ್ನಕುಮಾರ್, ರಘುನಾಥ್, ಗಂಗಾಧರ್, ಎರ್ರಿಸ್ವಾಮಿಯವರನ್ನು ಪೋಲೀಸರು ಜುಲೈ 10 ರಂದು ರಾತ್ರಿ ಅಮಾನುಷವಾಗಿ ಥಳಿಸಿದ್ದಾರೆ. ಸಮೀಪದ ಕಾರ್ಖಾನೆಯೊಂದರಲ್ಲಿ ಕಾರ್ಮಿಕರ ಮುಷ್ಕರ ನಡೆದಿದ್ದ ನೆಪವೊಡ್ಡಿ 144ನೇ ಸೆಕ್ಷನ್ ಹೇರಿ ಅದೇ ನೆಪವೊಡ್ಡಿ ಪೋಲೀಸರು ತಮ್ಮ ಹೇಯ ಕೃತ್ಯವನ್ನು ಸಮರ್ಥಿಸಿಕೊಳ್ಳಲು ಯತ್ನಿಸಿದ್ದಾರೆ. ಹಲ್ಲೆ ನಡೆಸಿದ ಪೋಲೀಸ್ ಅಧಿಕಾರಿಗಳು "ಬ್ಯಾಡಗಿ ಆಯೋಗ ಬಂದು ಏನ್ಮಾಡ್ತು, ಇನ್ನು ಮುಂದೆ ಅದೇಗೆ ಸಂಘಟನೆ ಮಾಡ್ತೀರಿ ನೋಡ್ತೀವಿ" ಎಂದು ಮುಂತಾಗಿ ಬಡಬಡಿಸಿದ್ದಾರೆ. ಸರ್ಕಾರ ನೇಮಿಸಿದ ಬ್ಯಾಡಗಿ ಆಯೋಗದ ಮುಂದೆ ಠಾಣೆಯಲ್ಲಿ ಯುವತಿಯೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ್ದ ಪೋಲೀಸರ ವಿರುದ್ಧ ಸಾಕ್ಷ್ಯ ನೀಡಿದ್ದ ಎಸ್.ಎಫ್.ಐ. ನಾಯಕರ ಮೇಲೆ ಸೇಡು ತೀರಿಸಿಕೊಳ್ಳಲು ಅಧಿಕಾರಿಗಳು ಈ ಸಂದರ್ಭವನ್ನು ಉಪಯೋಗಿಸಿಕೊಂಡಿದ್ದಾರೆ.

ಪೋಲೀಸರ ಈ ದುಷ್ಕೃತ್ಯವನ್ನು ತೀವ್ರವಾಗಿ ಖಂಡಿಸಿರುವ ಎಸ್.ಎಫ್. ಐ. ರಾಜ್ಯ ಸಮಿತಿಯು ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರಿಗೆ ದೂರು ನೀಡಿದೆ. ಜುಲೈ 17 ರಂದು ಎಸ್. ಎಫ್. ಐ. ರಾಜ್ಯ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಹಾಗೂ ಸಿ. ಪಿ. ಐ. (ಎಂ) ಶಾಸಕರಾದ ಪಿ. ರಾಮಚಂದ್ರ ರಾವ್ ರವರು ಗೃಹಖಾತೆ ರಾಜ್ಯ ಸಚಿವರಾದ ಶ್ರೀ ರಮೇಶ್ ಜಿಗಜಿಣಗಿಯವರನ್ನು ಭೇಟಿಯಾಗಿ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿ ಬಳ್ಳಾರಿ ಜಿಲ್ಲೆಯಲ್ಲಿ ಪ್ರಜಾಪ್ರಭುತ್ವ ಹಕ್ಕುಗಳನ್ನು ಸಂರಕ್ಷಿಸಲು ಮನವಿ ಸಲ್ಲಿಸಿದ್ದಾರೆ.

ಪೋಲೀಸ್ ದಬ್ಬಾಳಿಕೆಯನ್ನು ವಿರೋಧಿಸಿ ಹಾಗೂ ಅಲ್ಲಿಪುರ ಹಾಸ್ಟೆಲ್ ವಿದ್ಯಾರ್ಥಿಗಳ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಬಳ್ಳಾರಿಯಲ್ಲಿ ಜುಲೈ 18 ರಂದು ಸಾವಿರದಷ್ಟು ವಿದ್ಯಾರ್ಥಿಗಳು ಭಾರಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಬಳ್ಳಾರಿಯ ಪೋಲೀಸ್ ದೌರ್ಜನ್ಯವನ್ನು ಎಸ್. ಎಫ್. ಐ. ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸಿದೆ. ಪೋಲೀಸರ ಸತತ ಧಾಳಿಯಿಂದ ಹಿಮ್ಮೆಟ್ಟದೆ ಪ್ರಗತಿಪರ ವಿದ್ಯಾರ್ಥಿ ಚಳುವಳಿಯನ್ನು ಮುನ್ನಡೆಸುತ್ತಿರುವ ಕಾರ್ಯಕರ್ತರನ್ನು ಎಸ್. ಎಫ್. ಐ. ರಾಜ್ಯ ಸಮಿತಿಯ ಅಭಿನಂದಿಸಿದೆ.

## ಎಸ್. ಎಫ್. ಐ. ಸುದ್ದಿಗಳು

### ಪಿ. ಯು. ಸಿ. ಮಂಡಳಿ ದಕ್ಷತೆ :

# ಹೋರಾಟಕ್ಕೆ ಎಸ್. ಎಫ್. ಐ. ಕರೆ

ರಾಯಚೂರಿನ ಎಲ್. ವಿ. ಡಿ. ಕಾಲೇಜಿನ ಪ್ರಥಮ ಪಿ. ಯು. ಸಿ. ಮರು ಪರೀಕ್ಷೆಯನ್ನು ಮುಂಬರುವ ಅಗಸ್ಟ್ ತಿಂಗಳಲ್ಲಿ ನಡೆಸಲಾಗುತ್ತದೆ ಎಂಬ ಪಿ. ಯು. ಸಿ. ಮಂಡಳಿಯ ನಿರ್ಧಾರವನ್ನು ವಿರೋಧಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ಹೋರಾಟ ಸಮಿತಿಯು ಎಲ್ಲಾ ಶಾಲಾ ಕಾಲೇಜು ಗಳನ್ನು ಬಹಿಷ್ಕರಿಸಿ ಬೃಹತ್ ಮೆರವಣಿಗೆಯ ಮೂಲಕ ಪಿ. ಯು. ಸಿ. ಮಂಡಳಿಯ ಬೇಜವಾಬ್ದಾರಿ ಯುತ ಹಾಗೂ ಕ್ಷುಲ್ಲಕ ನೀತಿಯನ್ನು ವಿರೋಧಿಸಿ ಘೋಷಣೆಗಳನ್ನು ಕೂಗುತ್ತಾ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿತು. ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಲಾಯಿತು.

ನಂತರ ನಡೆದ ಬಹಿರಂಗ ಸಭೆಯಲ್ಲಿ ಹೋರಾಟ ಸಮಿತಿಯ ಅಧ್ಯಕ್ಷರಾದ ಕೆ. ಬಸವರಾಜ್ ಭ್ರಷ್ಟ ಪಿ. ಯು ಸಿ. ಮಂಡಳಿಯವರು ವಿದ್ಯಾರ್ಥಿಗಳ ಮೇಲೆ ಎಸಗಿದ ಅನ್ಯಾಯದ ಬಗ್ಗೆ ವಿವರಿಸಿ ಸಂಬಂಧಪಟ್ಟವರು ಕೂಡಲೇ ಸಮಸ್ಯೆ ಗಳನ್ನು ಪರಿಹರಿಸಬೇಕೆಂದು ಒತ್ತಾಯಿಸಿದರು ಒಂದು ವೇಳೆ ತಮ್ಮ ಸಮಸ್ಯೆಗಳಿಗೆ ಪರಿಹಾರ ದೊರಕದಿದ್ದಲ್ಲಿ ಉಗ್ರ ಸ್ವರೂಪದ ಹೋರಾಟ ನಡೆಸಬೇಕಾಗುತ್ತದೆಂದು ಎಚ್ಚರಿಕೆಯನ್ನು ನೀಡಿದ್ದಾರೆ.

ಬೇಡಿಕೆಗಳು ಈಡೇರುವ ತನಕ ಎಲ್. ವಿ. ಡಿ. ಕಾಲೇಜನ್ನು ಎಲ್ಲಾ ವಿದ್ಯಾರ್ಥಿಗಳು ಬಹಿಷ್ಕರಿಸಬೇಕೆಂದು ಕರೆ ನೀಡಲಾಗಿದೆ.

# ಹರಪನಹಳ್ಳಿ ತಾಲ್ಲೂಕ್ ರೈತ ಸಂಘದ ಸಭೆ

ದಿನಾಂಕ 16 7 - 84 ರಂದು ಪ್ರಾಂತ ರೈತಸಂಘದ ಹರಪನಹಳ್ಳಿ ತಾಲೂಕ್ ಸಂಘಟನಾ ಸಮಿತಿ ಸಭೆಯನ್ನು ತಿಂಗ್ರೀಹಳ್ಳಿ ಗ್ರಾಮದಲ್ಲಿ ಕರೆಯಲಾಯ್ತು. ಜಿಲ್ಲಾ ಸಂಚಾಲಕ ಕಾಂ. ಪಿ.ಆರ್. ವೆಂಕಟೇಶ್‌ರವರ ಸಮ್ಮುಖದಲ್ಲಿ ಸಭೆ ನಡೆದು ಈ ಕೆಳಗಿನ ನಿರ್ಣಯಗಳನ್ನು ತೆಗೆದುಕೊಳ್ಳಲಾಯ್ತು.

ಮೊದಲಿಗೆ ಕಾರ್ಯದರ್ಶಿ ಕಾಂ. ಪರಶುರಾಂ ಮತ್ತು, ಸಭೆಯ ಅಧ್ಯಕ್ಷರಾದ ಕಾಂ. ಹಾಲಕ್ತಿಹಾಲಪ್ಪನವರು ಈ ಒಂದುವರ್ಷದಲ್ಲಿ ಪ್ರಾಂತ ರೈತ ಸಂಘದ ಬೆಳವಣಿಗೆಯನ್ನು ವಿವರಿಸಿದರು

1 ಈಗಾಗಲೇ 1,200 ಸದಸ್ಯತ್ವವನ್ನು ನೊಂದಾಯಿಸಿದ್ದು ಕೂಡಲೇ ಸದಸ್ಯತ್ವ ಕಾರ್ಯಕ್ರಮವನ್ನು ತೀವ್ರಗೊಳಿಸಲು ತೀರ್ಮಾನಿಸಲಾಯ್ತು.

2 ಗ್ರಾಮ ಘಟಕಗಳು ಸ್ವಯಂ ಆಗಿ ಕಾರ್ಯ ನಿರ್ವಹಿಸುವಂತಾಗಬೇಕು. ಪ್ರತಿಯೊಂದು ಗ್ರಾಮಘಟಕವು ಪ್ರತಿಯೊಂದು ಚಟುವಟಿಕೆಗಳ ವರದಿಯನ್ನು ತಾಲೂಕ್ ಸಂಘಟನಾ ಸಮಿತಿಗೆ ತಿಳಿಸಬೇಕೆಂದು ತೀರ್ಮಾನಿಸಲಾಯಿತು.

3 ಸಂಘಟನಾ ವಿಸ್ತರಣೆಗಾಗಿ ಕೆಲವು ಗ್ರಾಮ.ಗಳಲ್ಲಿ ಹೊಸದಾಗಿ ಗ್ರಾಮ ಸಮಿತಿಗಳನ್ನು ಮಾಡುವುದಾಗಿ ತೀರ್ಮಾನಿಸಲಾಯ್ತು.

4 ದಿನಾಂಕ 19-7-84 ರಂದು ರೈತ ಸೇವಾಸಹಕಾರ ಸಂಘದಲ್ಲಿ ನಡೆದ ಅವ್ಯವಹಾರ ತಾರತಮ್ಯ ಬೀಜಗೊಬ್ಬರದ ವಿತರಣೆಯಲ್ಲಿ ಉಂಟಾದ ವಿಳಂಬ ನೀತಿಯನ್ನು ಖಂಡಿಸಿ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಯಿತು.

5 ದಿನಾಂಕ 1-5 84 ರಂದು ಉಪವಾಸ ಸತ್ಯಾಗ್ರಹದ ಸಂದರ್ಭದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ರೈತ ಸಂಘದ ಪ್ರತಿನಿಧಿಗಳ ನಡುವಿನ ಒಪ್ಪಂದದಂತೇ ಬಿ.ಡಿ ಬಿ ನಿವೇಶನಗಳನು ನೀಡಬೇಕೆಂದು ಒತ್ತಾಯಿಸಿದಾಗ ಅಧಿಕಾರಿಶಾಹಿಯಿಂದ ವರ್ತಿಸಿದ್ದನ್ನು ಖಂಡಿಸಲಾಯಿತು.

ಪುತ್ತೂರು

## ಪದವಿ ದರ್ಜೆ ಕಾಲೇಜಿಗೆ ಎಸ್. ಎಫ್. ಐ. ಒತ್ತಾಯ

ಜುಲೈ 13 ರಂದು, ಪುತ್ತೂರು ಎಸ್. ಎಫ್. ಐ. ಘಟಕದ ಸಭೆಯು ಕಾ॥ ಹುಕ್ರಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತು. ಆರಂಭದಲ್ಲಿ ಕಾ॥ ಮೋನಪ್ಪ ನವರು ಸ್ವಾಗತಿಸಿ, ಎಸ್.ಎಫ್.ಐ.ಯ ಕಾರ್ಯಕ್ರಮಗಳನ್ನು ವಿವರಿಸಿದರು.

ಸಭೆಯಲ್ಲಿ ಈ ಕೆಳಗಿನವುಗಳನ್ನು ಚರ್ಚಿಸಿ ಸರ್ವಾನುಮತದಿಂದ ನಿರ್ಣಯಗಳನ್ನು ಕೈಗೊಳ್ಳಲಾಯಿತು.

1. ಪುತ್ತೂರು ಉಪವಿಭಾಗವನ್ನು ಕೇಂದ್ರವಾಗಿಟ್ಟುಕೊಂಡು, ಸುಳ್ಯ, ಪುತ್ತೂರು ಮತ್ತು ಬೆಳ್ತಂಗಡಿ ತಾಲೂಕುಗಳ ದಲಿತ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲವಾಗುವಂತೆ, ಕಾಲೇಜು ವಿದ್ಯಾರ್ಥಿ ನಿಲಯವನ್ನು ಕೂಡಲೇ, ಈ ಶೈಕ್ಷಣಿಕ ವರ್ಷದಿಂದಲೇ ಆರಂಭಿಸಬೇಕೆಂದು ಸರಕಾರವನ್ನು ಒತ್ತಾಯಿಸುವ ಸಲುವಾಗಿ ಸಹಿ ಸಂಗ್ರಹ ಚಳುವಳಿಯನ್ನು ನಡೆಸಲು ನಿರ್ಣಯಿಸಲಾಯಿತು.

2. ಪುತ್ತೂರಿನ ಸರಕಾರಿ ಕಿರಿಯ ಕಾಲೇಜನ್ನು ಪದವಿ ದರ್ಜೆಯ ಕಾಲೇಜಾಗಿ ಪರಿವರ್ತಿಸಬೇಕು. ಪುತ್ತೂರಿನಲ್ಲಿರುವ ಎರಡು ಕಾಲೇಜುಗಳಲ್ಲಿ ಬಡ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯುತ್ತಿಲ್ಲ. ಈ ದೃಷ್ಟಿಯಿಂದಲೂ ಕೂಡಲೇ ಸರಕಾರ ಸರಕಾರಿ ಕಿರಿಯ ಕಾಲೇಜನ್ನು ಪದವಿ ಕಾಲೇಜನ್ನಾಗಿ ಇದೇ ಶೈಕ್ಷಣಿಕ ವರ್ಷದಿಂದಲೇ ಪರಿವರ್ತಿಸಬೇಕು.

ಸಭೆಯು ಈ ಕೆಳಗಿನವರನ್ನು ಪುತ್ತೂರು ಎಸ್.ಎಫ್.ಐ. ಘಟಕದ ಪದಾಧಿಕಾರಿಗಳನ್ನಾಗಿ ಆರಿಸಿತು.

ಅಧ್ಯಕ್ಷ : ಹುಕ್ರಪ್ಪ, ಉಪಾಧ್ಯಕ್ಷ: ಸೂರಪ್ಪ, ಕಾರ್ಯದರ್ಶಿ : ಮೋನಪ್ಪ, ಸಹ ಕಾರ್ಯದರ್ಶಿ : ಚಂದ್ರಶೇಖರ, ಕೋಶಾಧಿಕಾರಿ : ಪೂವಿಯ, ಸದಸ್ಯರು: ರಾಮಕೃಷ್ಣ ಬಿ. ಪಕ್ಕೀರ, ಬಾಬು ಕುಮಾರ, ಶೀನಪ್ಪ, ಪಿ. ಈಶ್ವರ.

## ಎಸ್. ಎಫ್. ಐ. ಮುಖಂಡರ ಮೇಲಿನ ಹಲ್ಲೆಗೆ ಖಂಡನೆ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಬೆಂಗಳೂರು ನಗರ ಸಮಿತಿಯ ನೇತೃತ್ವದ ನಿಯೋಗವೊಂದು 23-7-84 ರಂದು ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಅವರನ್ನು ಭೇಟಿ ಮಾಡಿ ಮನವಿಯೊಂದನ್ನು ಸಲ್ಲಿಸಿತು.

ಹಾಸ್ಟೆಲ್ ಸಮಸ್ಯೆಯೊಂದಕ್ಕೆ ಸಂಬಂಧಿಸಿದಂತೆ ಬಳ್ಳಾರಿಯ ಎಸ್. ಎಫ್.ಐ. ನಾಯಕರ ಮೇಲೆ ಅಲ್ಲಿನ ಪೋಲೀಸರು ಜೂನ್ 10 ರಂದು ನಡೆಸಿದ ಹಲ್ಲೆಯನ್ನು ಈ ಮನವಿಯಲ್ಲಿ ಪ್ರತಿಭಟಿಸಲಾಗಿದೆ. ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ ಸಂಘಟನಾ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಸಂರಕ್ಷಣೆಗೆ ಒತ್ತಾಯಿಸಲಾಗಿದೆ. ದೌರ್ಜನ್ಯವೆಸಗಿದ ಪೋಲೀಸ್ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಲಾಗಿದೆಯೆಂದು ಸಮಿತಿಯ ಕಾರ್ಯದರ್ಶಿ ಶ್ರೀಧರಮೂರ್ತಿ ಪ್ರಕಟನೆಯಲ್ಲಿ ತಿಳಿಸಿದಾರೆ.



## ಪ. ಬಂಗಾಳದಲ್ಲಿ ಸಾಮೂಹಿಕ ಚಳವಳಿ

ಅಕ್ರಮ ದಾಸ್ತಾನುಗಾರರನ್ನು, ವಿಪರೀತ ಲಾಭವನ್ನು ಕೊಳ್ಳೆ ಹೊಡೆಯುವ ವರ್ತಕರ ವಿರುದ್ಧ ಜನಸಾಮಾನ್ಯರನ್ನು ಸಂಘಟಿಸಿ ಅವರ ಹೀನ ಕೃತ್ಯಗಳನ್ನು ತಡೆಯುವ ಹೊಸ ರೀತಿಯ ಚಳುವಳಿ ನಡೆಸಲು ಪ. ಬಂಗಾಲದ ಎಡರಂಗ ಸರ್ಕಾರ ತೀರ್ಮಾನಿಸಿದೆ.

ಜನಸಾಮಾನ್ಯರಿಗೆ ಅಗತ್ಯವಿರುವ ವಸ್ತುಗಳನ್ನು ನ್ಯಾಯ ಬೆಲೆ ಅಂಗಡಿಗಳ ಮೂಲಕ ಸರ್ಕಾರ ವಿತರಿಸುತ್ತಿದೆ ಈ ರೀತಿಯ ವಿತರಣೆಯಲ್ಲಿ ಯಾವುದೇ ರೀತಿಯ ಅಡಚಣೆಗಳೂ ಉಂಟಾಗದಂತೆ ಹೊರರಾಜ್ಯಗಳಿಂದ ಅಧಿಕ ಪ್ರಮಾಣದಲ್ಲಿ ಸರಕುಗಳನ್ನು ಕೊಳ್ಳಬೇಕೆಂದು ರಾಜ್ಯದ ಅಗತ್ಯ ವಸ್ತುಗಳ ನಿಗಮವನ್ನು ಸರ್ಕಾರ ಒತ್ತಾಯಿಸಿದೆ.

ರಾಜ್ಯ ಸರ್ಕಾರ 19 ಅಗತ್ಯ ವಸ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ವಿತರಣೆ ಮಾಡುತ್ತಿದ್ದಾಗ್ಯೂ ಕೂಡ ಕೆಲವು ಖಾಸಗೀ ವರ್ತಕರು ಬೆಲೆಯನ್ನು ಏರಿಸಲು ತೊಡಗಿದ್ದಾರೆ ಈ ಬಗ್ಗೆ ಸರ್ಕಾರ ಅವರನ್ನು ಎಚ್ಚರಿಸಿದ್ದರೂ ಕೂಡ ಅದನ್ನು ಗಣನೆಗೆ ತೆಗೆದುಕೊಳ್ಳದೆ ಬೆಲೆ ಏರಿಕೆಯನ್ನು ಮುಂದುವರಿಸುತ್ತಲೇ ಇರುವುದರಿಂದಾಗಿ ಸರ್ಕಾರ ಜನತೆಯನ್ನು ಇದರ ವಿರುದ್ಧ ಹೋರಾಡುವಂತೆ ಪ್ರೇರೇಪಿಸುವ ಕ್ರಮಗಳನ್ನು ಕೈಗೊಂಡಿದೆ.

[1ನೇ ಪುಟದಿಂದ]

ಪ್ರಾಥಮಿಕ ಶಾಲೆ ಮಕ್ಕಳಿಗೆ ಶಾಲೆ ಕಟ್ಟಡಗಳ ವ್ಯವಸ್ಥೆ ಆಗಬೇಕೆಂದು, ಮುರಿದು ಬೀಳುವ ಪರಿಸ್ಥಿತಿಯಲ್ಲಿರುವ ಪ್ರಾಥಮಿಕ ಶಾಲೆಗಳಿಗೆಲ್ಲಾ ಕೂಡಲೇ ಸರಿಯಾದ ರಿಪೇರಿ ಕೆಲಸವಾಗಲೇ ಬೇಕು ಹೆಚ್ಚಿನ ಶಾಲೆಗಳಲ್ಲಿ ಖಾಸಗೀ ಜನರ ಮನೆಗಳಾಗಿರುವುದರಿಂದ, ಅವುಗಳನ್ನು ವಶಪಡಿಸಿಕೊಳ್ಳಲು ಮನೆಮಾಲೀಕರೆಲ್ಲಾ ನ್ಯಾಯಾಲಯಗಳ ಕಟ್ಟೆ ಹತ್ತಿ, ಮನೆಗಳನ್ನು ವಶಪಡಿಸಿಕೊಳ್ಳುವಂಥ ತೀರ್ಪು ಪಡೆಯುತ್ತಿರುವುದರಿಂದ ಈಗಿರುವ ಪ್ರಾಥಮಿಕ ಶಾಲೆಗಳ ಕಟ್ಟಡಗಳಲ್ಲಿ ಸರಕಾರದ ಅಸ್ತಿ ಎಂದು ಸಾರುವ ಸರಕಾರದ ಆಜ್ಞೆ ಹೊರಡಿಸುವುದು ಅಗತ್ಯ, ಇಲ್ಲವಾದರೆ ಲಕ್ಷಾವಧಿ ಪ್ರಾಥಮಿಕ ಶಾಲೆ ಮಕ್ಕಳು ನಿರ್ಗತಿಕರಾಗುವ ಸಂಭವವಿದೆ. ಶಿಕ್ಷಣ ಮಂತ್ರಿ ರಾಚಯ್ಯನವರೂ, ಜನತಾ ಸರ್ಕಾರವು ಕೂಡಲೇ ಕಣ್ಣು ತೆಗೆದು ಪ್ರಾಥಮಿಕ ಶಿಕ್ಷಣ ಪಡೆಯುವ ಮಕ್ಕಳಿಗೆ ಶಾಲೆಗಳ ವ್ಯವಸ್ಥೆ ಮಾಡಿಕೊಡುವುದು ಅತ್ಯಗತ್ಯ.

★

Printed & Publishedby P. Ramachandra Raoby him on behalf of the Communist Pary of India (Marxist) Karnataka State Co mittee, K. V.Temple Street, Sultanpet, Bangalore-560053 Editorial and managerial office, L-56, K V. Temple Street, Sultanpet. B-53. Phone : 24154

Editor : P. Ramachandra Rao　　Managing Editor : N. K. Upadhyaya